ಸಂಪುಟ : 8 ಸಂಚಿಕೆ 312 ಪುಟ : 4 ಬೆಲೆ : 3.00 ಗುರುವಾರ ಜನವರಿ 25, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 312 Pages : 4 Price : 3.00 Thursday JANUARY 25, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 25ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.


**ಸ್ಥಳಗಳ ವಿವರ :** ವಾರ್ಡ್ ನಂ. 21, 22 ವಿಜಯನಗರ ಶಾಲೆಯ ಭಾಗ, ವಾಲ್ಮೀಕಿ ಭವನ, ಶಿಗ್ಗಾವಿ ಪ್ಲಾಟ್, ಕಮತರ ಪ್ಲಾಟ್, ಟವರ್ ಕಂಬ, ಕರುಗಲ್ ಲೇಔಟ್ ಕೆಲವು ಭಾಗಗಳು. ವಾರ್ಡ್ ನಂ. 5,6 ಬಜಂತ್ರಿ ಓಣಿ, ಕುಲಕರ್ಣಿ ಗಲ್ಲಿ, ಅಂಬೇಡ್ಕರ್ ನಗರ ದಿಬ್ಬದ ಲೈನ್.

ವಾರ್ಡ್ ನಂ. 19, 20, 21, 23 ದ್ಯಾಮವ್ವನ ಕಟ್ಟಿ, ಜಂತ್ಲಿಯವರ ಹಳೆ ಲೈನ್, ಹಾಳದಿಬ್ಬ, ಕರಿದೇವರ ಗುಡಿ, ಕೆರಕಲಮಟ್ಟಿ ಅವರ ಲೈನ್, ಕಲಬಂಡಿ ಅವರ ಲೈನ್, ಗಂಜಿ ಬಸವೇಶ್ವರ ಸರ್ಕಲ್, ಪಲ್ಲೆದರ ಓಣಿ. ವಾರ್ಡ್ ನಂ. 26 ದನದ ದವಾಖಾನೆ, ಹಳೆ ಬಸ್ ಸ್ಟ್ಯಾಂಡ್ ಲೈನ್, ಮಹೇಂದ್ರಕರ್ ಸರ್ಕಲ್ ಬಲಭಾಗದ ಲೈನ್, ಹೂವಿನ ಮಾರ್ಕೆಟ್ ಲೈನ್ ಉಳಿದ ಭಾಗಗಳು.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲಿಂ. ಚನ್ನಬಸವ ಸ್ವಾಮೀಜಿ, ಲಿಂ. ಶಿವಬಸವ ಸ್ವಾಮೀಜಿಗಳ ಪುಣ್ಯಸ್ಮರಣೋತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ





ಸಮೀಪದ ನಿಡಗುಂದಿ ಕೊಪ್ಪ ಶಾಖಾ ಶಿವಯೋಗ ಮಂದಿರದ ಭವರೋಗ ವೈದ್ಯರು, ಮಹಾತಪಸ್ವಿ ಲಿಂ. ಚನ್ನಬಸವ ಸ್ವಾಮೀಜಿಯವರ 40ನೇ ಹಾಗೂ ಆರೋಗ್ಯ ದಾಸೋಹಿ ಲಿಂ. ಶಿವಬಸವ ಸ್ವಾಮೀಜಿಯವರ 8ನೇ ವರ್ಷದ ಪುಣ್ಯಸ್ಮರಣೋತ್ಸವವು ಗುರುವಾರ ನಡೆಯಲಿದೆ.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 6ಕ್ಕೆ ಉಭಯ ಶ್ರೀಗಳವರ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ನಡೆಯಲಿದೆ. ಬೆಳಿಗ್ಗೆ 9ಕ್ಕೆ ಜಿಗೇರಿ ಹಿರೇಮಠದ ಷ.ಬ್ರ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿಯವರಿಂದ ಷಟಸ್ಥಲ ಧ್ವಜಾರೋಹಣ ನಡೆಯಲಿದೆ. ಬೆಳಿಗ್ಗೆ 10ಕ್ಕೆ ಉಭಯ ಶ್ರೀಗಳವರ ಭಾವಚಿತ್ರದ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜರುಗುವುದು.

ಬೆಳಿಗ್ಗೆ 11ಕ್ಕೆ ಉಭಯ ಲಿಂ. ಶ್ರೀಗಳವರ ಸಂಸ್ಮರಣಾ ಸಭೆ ಹಾಗೂ ಮಾಜಿ ಸೈನಿಕರ ಸತ್ಕಾರ ಸಮಾರಂಭ ನಡೆಯಲಿದ್ದು, ಹಾಲಕೆರೆ ಸಂಸ್ಥಾನ ಮಠದ ಜ.ಮುಪ್ಪಿನ ಬಸವಲಿಂಗ ಸ್ವಾಮೀಜಿಯವರು ದಿವ್ಯ ಸಾನಿಧ್ಯ ವಹಿಸುವರು. ಹಾವೇರಿ ಹುಕ್ಕೇರಿಮಠ ಹಾಗೂ ಶಿವಯೋಗಮಂದಿರ ಶ್ರೀಮದ್ವೀರಶೈವ ಉಪಾಧ್ಯಕ್ಷರಾದ ಸದಾಶಿವ ಸ್ವಾಮೀಜಿಯವರು ನೂತನ ವರ್ಷದ ದಿನದರ್ಶಿಕೆ ಬಿಡುಗಡೆಗೊಳಿಸುವರು.

ಶಾಖಾ ಶಿವಯೋಗಮಂದಿರ ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಸ್ವಾಮೀಜಿ ನೇತೃತ್ವದಲ್ಲಿ ನರೇಗಲ್ಲ ಹಿರೇಮಠದ ಷ.ಬ್ರ. ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ನಿಡಗುಂದಿ ಧರ್ಮರ ಮಠದ ಷಣ್ಮುಖಪ್ಪಜ್ಜನವರು ದಿವ್ಯ ಸಮ್ಮುಖ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಜಿ.ಎಸ್. ಪಾಟೀಲ, ಮಾಜಿ ಸಚಿವ ಕಳಕಪ್ಪ ಬಂಡಿ ಭಾಗವಹಿಸುವರು. ದಿನದರ್ಶಿಕೆ ದಾನಿ ನಿವೃತ್ತ ಪೊಲೀಸ್ ವೀರಣ್ಣ ಬಸಪ್ಪ ಸೊಬಗಿನ ಉಪಸ್ಥಿತರಿರುವರು. ಅಬ್ಬಿಗೇರಿ ಪಿ.ಆರ್.ಪಿ ಎಸ್. ಆರ್. ಮೂಲಿಮನಿ ಉಪನ್ಯಾಸ ನೀಡಲಿದ್ದಾರೆ ಎಂದು ಶಾಖಾ ಶಿವಯೋಗಮಂದಿರ ನಿಡಗುಂದಿಕೊಪ್ಪ ಶ್ರೀಮಠದ ಸಕಲ ಸದ್ಭಕ್ತ ಮಂಡಳಿ ಹಾಗೂ ಪುಣ್ಯ ಸ್ಮರಣೋತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಿಜೆಪಿ ಜಿಲ್ಲಾಧ್ಯಕ್ಷರ ಅಧಿಕಾರ ಗ್ರಹಣ ಸಮಾರಂಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್

# ಗುಲಾಮಿ ಸಂಸ್ಕೃತಿ ಬಿತ್ತಿದ ಕಾಂಗ್ರೆಸ್

■ವಿಜಯಸಾಕ್ಷಿ ಸುದ್ದಿ, ಗದಗ

ಗ್ಯಾರಂಟಿ ಹೆಸರಿನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಸರಕಾರಕ್ಕೆ ಈಗಲೂ 10 ಕೆಜಿ ಅಕ್ಕಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಬಿಜೆಪಿ ಸರಕಾರ ಕೊನೆಯ ಬಜೆಟ್‌ನಲ್ಲಿ ರೈತರಿಗಾಗಿ 7,500 ಕೋಟಿ ರೂ. ಮೀಸಲಿರಿಸಿತ್ತು. ಆದರೆ ಸಿದ್ದರಾಮಯ್ಯ ಸರ್ಕಾರ ಕೇವಲ 3,500 ಕೋಟಿ ರೂ. ಮಾತ್ರ ತೆಗೆದಿರಿಸಿದೆ. ಆಡಳಿತಕ್ಕೆ ಬಂದ 6 ತಿಂಗಳಲ್ಲಿ 700ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ 11,500 ಕೋಟಿ ರೂ ಅನುದಾನವನ್ನು ಅನ್ಯ ಕಾರ್ಯಕ್ಕೆ ಬಳಸಿಕೊಂಡಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಆರೋಪಿಸಿದರು.

ಬುಧವಾರ ನಗರದ ಬಿಜೆಪಿ ಕಚೇರಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷರ ಅಧಿಕಾರ ಗ್ರಹಣ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ದೇಶದಲ್ಲಿ ಗುಲಾಮಗಿರಿ ಮನಸ್ಥಿತಿಯನ್ನು ಬೆಳೆಸುತ್ತಿದೆ. ಕಾಂಗ್ರೆಸ್ ನಾಯಕರು ಕೇವಲ ಒಂದು ಕುಟುಂಬಕ್ಕೆ ತಮ್ಮ ನಿಷ್ಠೆಯನ್ನು ತೋರಿಸುವ ಮೂಲಕ, ಗರೀಬಿ ಹಟಾವೋ ಬದಲಾಗಿ, ಗರೀಬರ ಹಟಾವೋ ಮಾಡುತ್ತಿದೆ ಎಂದರು.

ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ದೇಶದಲ್ಲಿ ಹೆಚ್ಚಿನ ವೈದ್ಯಕೀಯ ಸಂಶೋಧನೆಗಳು ನಡೆಯಲಿಲ್ಲ. ವಿದೇಶದಲ್ಲಿ ಸಂಶೋಧನೆಯಾಗಿ ದಶಕಗಳ ನಂತರ ಭಾರತದಲ್ಲಿ ಅವುಗಳನ್ನು ಬಳಕೆ ಮಾಡಿಕೊಳ್ಳಲಾಯಿತು. ಆದರೆ ಸದ್ಯ ಪ್ರಧಾನಿ ನರೇಂದ್ರ ಮೋದಿ ಅವರು ವೈದ್ಯಕೀಯ ಸಂಶೋಧನೆಗೆ ಒತ್ತು ನೀಡಿದ್ದರಿಂದ



ಕೋವಿಡ್ ಲಸಿಕೆ ತುರ್ತಾಗಿ ದೇಶದ ಜನರಿಗೆ ಲಭ್ಯವಾಗುವಂತಾಯಿತು. 80ಕ್ಕೂ ಹೆಚ್ಚು ದೇಶಗಳಿಗೆ ಲಸಿಕೆ ಪೂರೈಕೆ ಮಾಡಿದ ಹೆಗ್ಗಳಿಕೆ ಭಾರತಕ್ಕಿದೆ ಎಂದರು.

ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ರಾಜು ಕುರಡಗಿ ಅಧಿಕಾರ ಸ್ವೀಕರಿಸಿ ಮಾತನಾಡಿ, ಬಿಜೆಪಿ ವರಿಷ್ಠರು ನನ್ನ ಮೇಲೆ ವಿಶ್ವಾಸವಿಟ್ಟು ಜಿಲ್ಲಾಧ್ಯಕ್ಷ ಸ್ಥಾನದ ಜವಾಬ್ದಾರಿ ನೀಡಿದ್ದಾರೆ. ಆ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ, ಎಲ್ಲರ ವಿಶ್ವಾಸದೊಂದಿಗೆ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಹಾವೇರಿ ಮತ್ತು ಬಾಗಲಕೋಟೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸುತ್ತೇನೆ ಎಂದರು.

ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ವಿ.ಪ ಸದಸ್ಯ ಎಸ್.ವಿ. ಸಂಕನೂರ, ಮಾಜಿ ಶಾಸಕ ಕಳಕಪ್ಪ ಬಂಡಿ, ಬಿಜೆಪಿ ಮುಖಂಡ ಎಂ.ಎಸ್. ಕರಿಗೌಡ್ರ, ನಾಗರಾಜ ಕುಲಕರ್ಣಿ ಮಾತನಾಡಿದರು. ನಿಕಟಪೂರ್ವ ಅಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ, ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಮುಂಡರಗಿ ಮಂಡಲ ಅಧ್ಯಕ್ಷ ಹೇಮಗಿರೀಶ ಹಾವಿನಾಳ, ಶ್ರೀಪತಿ ಉಡುಪಿ, ಕಾಂತಿಲಾಲ್ ಬನ್ಸಾಲಿ, ಶ್ರೀಕಾಂತ ಖಟವಟೆ ಮುಂತಾದವರು ವೇದಿಕೆಯಲ್ಲಿದ್ದರು.

> ಹಾವೇರಿ ಸಂಸದ ಶಿವಕುಮಾರ ಉದಾಸಿ ಅವರು ಈ ಬಾರಿ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ನಂತರ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ. ಇದು ಉತ್ತಮ ಬೆಳವಣಿಗೆಯಲ್ಲ. ಟಿಕೆಟ್ ಲಭಿಸದ ಆಕಾಂಕ್ಷಿಗಳು ವಿರೋಧ ವ್ಯಕ್ತಪಡಿಸುವ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆಯಿದ್ದು, ನಮ್ಮ ಅಭ್ಯರ್ಥಿ ಕಮಲದ ಚಿಹ್ನೆ ಎಂದು ಭಾವಿಸಿ, ಪಕ್ಷದ ಅಭ್ಯರ್ಥಿಯ ಪರ ಕೆಲಸ ಮಾಡಬೇಕು.
>
> **– ಸಿ.ಸಿ. ಪಾಟೀಲ.**
> ಶಾಸಕರು, ನರಗುಂದ.




### 'ನೆರೆಹೊರೆ ಗುಂಪು' ಸಮಾರಂಭವನ್ನು ಉದ್ಘಾಟಿಸಿದ ಶಾಸಕ ಜಿ.ಎಸ್. ಪಾಟೀಲ

# 'ನೆರೆಹೊರೆ ಗುಂಪು' ಯೋಜನೆಯಿಂದ ಅಭಿವೃದ್ಧಿ

■ವಿಜಯಸಾಕ್ಷಿ ಸುದ್ದಿ, ರೋಣ

ನೂರು ಮತದಾರರಿಗೊಂದು ನೆರೆಹೊರೆ ಗುಂಪನ್ನು ರಚಿಸಿ. ಗುಂಪಿನಲ್ಲಿ ಚುನಾವಣೆ ಮೂಲಕ ಅಥವಾ ಲಾಟರಿ ಮೂಲಕ ಪ್ರತಿನಿಧಿ1, ಪ್ರತಿನಿಧಿ2 ಎಂಬ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು ವಾರ್ಡ್ ಸಮಸ್ಯೆಗಳ ಕುರಿತು ಕ್ರಿಯಾಯೋಜನೆಯನ್ನು ರೂಪಿಸುವ ಹಾಗೂ ಸಮಸ್ಯೆ ಗಳನ್ನು ಇತ್ಯರ್ಥಪಡಿಸುವುದು ನೆರೆಹೊರೆ ಗುಂಪಿನ ಕರ್ತವ್ಯವಾಗಿದ್ದು, ಪಟ್ಟಣದ ಜನತೆ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಅವರು ಬುಧವಾರ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಹಾಗೂ ತಾಲೂಕಾಡಳಿತ ಮತ್ತು ಪುರಸಭೆಯ ನೇತೃತ್ವದಲ್ಲಿ ಜರುಗಿದ ನೆರೆಹೊರೆ ಗುಂಪು ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ನೆರೆಹೊರೆ ಗುಂಪು ಯೋಜನೆ ಕಾರ್ಯಕ್ರಮದಿಂದ ವಾರ್ಡ್‌ಗಳಲ್ಲಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಾರ್ಡ್‌ಗಳ ಸಾರ್ವಜನಿಕರೇ ನಿರ್ಧರಿಸಿ ಕ್ರಿಯಾ ಯೋಜನೆಯನ್ನು ರೂಪಿಸಿ, ವಾರ್ಡ್ ಪ್ರತಿನಿಧಿಗಳ ಬಳಿ ನೀಡಬೇಕು. ವಾರ್ಡ್ ಪ್ರತಿನಿಧಿಗಳು ಸಹ ನೆರೆಹೊರೆ ಗುಂಪಿನ ಸದಸ್ಯರುಗಳು ನೀಡಿರುವ ಯೋಜನೆ ಮೇಲೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಜೊತೆಗೆ ಅದೇ ಮಾಹಿತಿಯನ್ವಯ ಫಲಾನುಭವಿಗಳನ್ನು ಗುರುತಿಸುವ ಕಾರ್ಯವಾಗಬೇಕು. ಇದು ಪ್ರಜಾಪ್ರಭುತ್ವ ಬಲವರ್ಧನೆಗೆ ಸಹಾಯಕವಾಗಲಿದೆ ಎಂದರು.




> ಮಾಜಿ ಶಾಸಕ ಡಿ.ಆರ್. ಪಾಟೀಲ ಮಾತನಾಡಿ, ನೆರೆಹೊರೆ ಗುಂಪು ರಚನೆಯಿಂದ ಅನೇಕ ಸಮಸ್ಯೆಗಳನ್ನು ಬಗೆಹರಿಸಬಹುದು. ಅರ್ಹ ಫಲಾನುಭವಿಗಳಿಗೆ ನ್ಯಾಯ ಸಿಗಬಹುದು ಎಂಬ ನಿರೀಕ್ಷೆ ಹೊಂದಿ, ಈ ಹಿಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನೆರೆಹೊರೆ ಗುಂಪಿನ ಮಹತ್ವವನ್ನು ಮಂಡಿಸಲಾಯಿತು. ನಂತರ ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಒಪ್ಪಿಗೆ ಸೂಚಿಸಿದರು. ಬಿಜೆಪಿ ಸಚಿವ ಮಾಧುಸ್ವಾಮಿಯವರು ಕಾನೂನು ರಚಿಸಿದರೂ ಸಹ ಮತ್ತೆ ಸಿದ್ದರಾಮಯ್ಯನವರೇ ಮಹತ್ವದ ಯೋಜನೆಯನ್ನು ಜಾರಿಗೆ ತಂದಿದ್ದಾರೆ ಎಂದು ವಿವರಿಸಿದರಲ್ಲದೆ, ನಾಗರಿಕ ಸಮುದಾಯ ಇದರಲ್ಲಿ ಭಾಗಿಯಾಗಬೇಕು ಎಂದು ಕರೆ ನೀಡಿದರು.

ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಮುದಕಮ್ಮನವರ, ಯೋಜನಾ ನಿರ್ದೇಶಕ ಬ್ಯಾಕೋಡ್, ಮಿಥುನ್ ಪಾಟೀಲ, ಪರಶುರಾಮ ಅಳಗವಾಡಿ, ಪ್ರಭು ಮೇಟಿ, ಯೂಸುಪ್ ಇಟಗಿ, ಶಫೀಕ ಮೂಗನೂರ, ಗದಿಗೆಪ್ಪ ಕಿರೇಸೂರ, ಬಾವಾಸಾಬ ಬೆಟಗೇರಿ ಸೇರಿದಂತೆ ಅನೇಕ ಮುಖಂಡರು ಹಾಗೂ ಪುರಸಭೆಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಎನ್‌ಪಿಎಸ್ ರದ್ದುಗೊಳಿಸಲು ಮನವಿ



■ವಿಜಯಸಾಕ್ಷಿ ಸುದ್ದಿ, ರೋಣ

ಎನ್‌ಪಿಎಸ್ ರದ್ದುಗೊಳಿಸುವ ಮೂಲಕ 7ನೇ ವೇತನ ಆಯೋಗವನ್ನು ಶಿಘ್ರವೇ ಜಾರಿಗೆ ತರಬೇಕು ಎಂದು ತಾಲೂಕಾ ನೌಕರರ ಸಂಘದ ಅಧ್ಯಕ್ಷ ಜಗದೀಶ ಮಡಿವಾಳರ ಮನವಿ ಮಾಡಿದರು.

ಅವರು ಬುಧವಾರ ನೌಕರರೊಂದಿಗೆ ಶಾಸಕ ಜಿ.ಎಸ್. ಪಾಟೀಲರ ನಿವಾಸಕ್ಕೆ ತೆರಳಿ ಮನವಿ ಸಲ್ಲಿಸಿ ಮಾತನಾಡಿದರು.

ಎನ್‌ಪಿಎಸ್ ಯೋಜನೆಯಿಂದ ನೌಕರರು ಸಂಕಷ್ಟದ ಬದುಕು ಸಾಗಿಸುತ್ತಿದ್ದಾರೆ. ಹಳೆಯ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಿ ರಾಜ್ಯ ಸರಕಾರಿ ನೌಕರರಿಗೆ ನ್ಯಾಯ ಒದಗಿಸಬೇಕು. ಮುಖ್ಯವಾಗಿ 7ನೇ ವೇತನ ಆಯೋಗವನ್ನು ಜಾರಿಗೊಳಿಸುವ ಮೂಲಕ ಸರಕಾರದ ಆದೇಶವನ್ನು ಹೊರಡಿಸಬೇಕು. ಕರ್ನಾಟಕ ಆರೋಗ್ಯ ಸಂಜೀವಿನಿ ಅನುಷ್ಠಾನಗೊಳಿಸಬೇಕು ಎಂದರು.

ರಾಜ್ಯದಲ್ಲಿ 6 ಲಕ್ಷ ನೌಕರರಿದ್ದು, ಇನ್ನೂ 2.5 ಲಕ್ಷ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಸರಕಾರ ಭರ್ತಿ ಮಾಡುವ ಮೂಲಕ ಈಗ ನೌಕರರಿಗೆ ಆಗುತ್ತಿರುವ ಹೊರೆಯನ್ನು ಕಡಿಮೆಗೊಳಿಸಬೇಕು. ಅಲ್ಲದೆ ಪ್ರಸ್ತುತ ದಿನಗಳಲ್ಲಿ ಅಗತ್ಯ ವಸ್ತುಗಳ ಬೆಲೆಗಳು ಸಹ ಗಗನಕ್ಕೇರಿದ್ದು, ನೌಕರರ ಜೀವನ ನಿರ್ವಹಣೆಯೂ ಕಷ್ಟಕರವಾಗಿದ್ದು, ಶಾಸಕರು ಸರಕಾರಕ್ಕೆ ಒತ್ತಡ ಹೇರುವ ಮೂಲಕ ನೌಕರರ ಸಮಸ್ಯೆಗಳನ್ನು ಹೋಗಲಾಡಿಸಲು ಮುಂದಾಗಬೇಕು ಎಂದು ಶಾಸಕ ಜಿ.ಎಸ್. ಪಾಟೀಲರಲ್ಲಿ ಮನವಿ ಮಾಡಿದರು.

ವೈ.ಡಿ. ಗಾಣಿಗೇರ, ಬಿ.ಎಸ್. ಮಾನೇದ, ಎಸ್.ಜಿ. ದಾನಪ್ಪಗೌಡರ, ಎ.ಡಿ. ನದಾಫ್, ರಾಮರೆಡ್ಡಿ ರಡ್ಡೆರ, ರಂಗಪ್ಪ ಮಾದರ, ಸಿ.ಕೆ. ಕೇಸರಿ, ಬಿ.ಎನ್. ಕ್ಯಾತನಗೌಡ್ರ, ವಿರುಪಮ್ಮ ಹಿರೇಮಠ, ಸಿ.ಕೆ. ಸೂಡಿ, ಎಸ್.ಬಿ. ಕಿತ್ತಲಿ, ಸಿ.ಎಲ್. ಪಾಟೀಲ, ಪ್ರಕಾಶ ಕರ್ಕಿಕಟ್ಟಿ ಸೇರಿದಂತೆ ನೌಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# 40 ಲಕ್ಷ ರೂ. ಸ್ವತ್ತು ಮರಳಿಸಿದ ಪೊಲೀಸರು

■ವಿಜಯಸಾಕ್ಷಿ ಸುದ್ದಿ, ಗದಗ

ಕಳ್ಳತನವಾದ ಮೊಬೈಲ್‌ಗಳನ್ನು ಸಿಇಐಆರ್ ತಂತ್ರಾಂಶದ ಮೂಲಕ ಪತ್ತೆಹಚ್ಚಿ, ಅವುಗಳನ್ನು ವಾರಸುದಾರರಿಗೆ ಮರಳಿಸುವಲ್ಲಿ ಗದಗ ಜಿಲ್ಲೆ ರಾಜ್ಯದಲ್ಲಿಯೇ 2ನೇ ಸ್ಥಾನದಲ್ಲಿದೆ ಎಂದು ಎಡಿಜಿಪಿ ಮುರುಗನ್ ಹೇಳಿದರು.

ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಅಂದಾಜು 40 ಲಕ್ಷ ರೂ. ಮೌಲ್ಯದ ಕಳ್ಳತನವಾದ ಸ್ವತ್ತುಗಳನ್ನು ವಾರಸುದಾರರಿಗೆ ಮರಳಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿದರೆ ಗದಗ ಜಿಲ್ಲೆ ಮೊಬೈಲ್ ಪತ್ತೆ ಕಾರ್ಯದಲ್ಲಿ ಮುಂಚೂಣಿಯಲ್ಲಿದೆ ಎಂದರು.



ಗದಗ ಜಿಲ್ಲಾ ಪೊಲೀಸರ ಸತತ ಪ್ರಯತ್ನದಿಂದ ನೂರಾರು ಮೊಬೈಲ್, ಬೈಕ್, ಟ್ರ್ಯಾಕ್ಟರ್ ಟ್ರಾಲಿ, ಬೆಳ್ಳಿ-ಬಂಗಾರದ ಆಭರಣಗಳನ್ನು ಪತ್ತೆ ಮಾಡಲಾಗಿದೆ. ಪೊಲೀಸರ ಈ ಕಾರ್ಯ ನಿರಂತರವಾಗಿರಲಿ. ಕಳೆದೆರಡು ದಿನಗಳಿಂದ ಜಿಲ್ಲೆಯ ಪೊಲೀಸ್ ಇಲಾಖೆಯನ್ನು ಪರಿಶೀಲಿಸಿದ್ದು, ಉತ್ತಮ ಕೆಲಸಗಳಾಗಿರುವುದು ಗಮನಕ್ಕೆ ಬಂದಿದೆ. ಜಿಲ್ಲೆಯ ಕಾನೂನು ಸುವ್ಯವಸ್ಥೆ ಉತ್ತಮ ಸ್ಥಿತಿಯಲ್ಲಿದೆ ಎಂದರು.

▸▸3ನೇ ಪುಟಕ್ಕೆ

# ನಾಳೆ ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವ ಆಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತದಿಂದ ಗಣರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 26ರಂದು ಬೆಳಿಗ್ಗೆ 9ಗಂಟೆಗೆ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮ ಜರುಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಧ್ವಜಾರೋಹಣ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸಲಿದ್ದಾರೆ. ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಅವರು ಸ್ವಾಗತ ಕೋರಿದ್ದಾರೆ.

**2024ರ ಗಣರಾಜ್ಯೋತ್ಸವ ಕಾರ್ಯಕ್ರಮಗಳು :** ಜನವರಿ 26ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ಕಾರ್ಯಕ್ರಮ: ಧ್ವಜಾರೋಹಣ, ರಾಷ್ಟ್ರಗೀತೆ, ನಾಡಗೀತೆ, ಪರೇಡ್ ವೀಕ್ಷಣೆ, ಪಥ ಸಂಚಲನ ಮತ್ತು ವಂದನೆ ಸ್ವೀಕಾರ, ಗಣರಾಜ್ಯೋತ್ಸವ ಸಂದೇಶ, ಸಾಧಕರಿಗೆ ಸನ್ಮಾನ ಕಾರ್ಯಕ್ರಮಗಳು ಜರುಗಲಿವೆ.

## ಸಂಪಾದಕೀಯ

# ಇನ್ನೇನಿದ್ದರೂ ಲೋಕಸಭೆ ಚುನಾವಣೆ

2024ರ ಲೋಕಸಭೆ ಚುನಾವಣೆ ಸಂಬಂಧ ಕೇಂದ್ರ ಚುನಾವಣೆ ಆಯೋಗ, ಚುನಾವಣೆ ನಡೆಯುವ ಸಂಭಾವ್ಯ ದಿನಾಂಕವೊಂದನ್ನು ನೀಡಿದೆ. ಇದೇ ಏಪ್ರಿಲ್ 16ರ ಒಳಗಾಗಿ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆಯೋಗ ಚಿಂತನೆ ನಡೆಸಿದೆ.

ಈ ಬಗ್ಗೆ ಕೇಂದ್ರ ಚುನಾವಣಾ ಆಯೋಗ ಅಧಿಕೃತ ಮಾಹಿತಿ ನೀಡಿಲ್ಲ. ಆದರೆ ಚುನಾವಣಾ ಕರ್ತವ್ಯವನ್ನ ನಿರ್ವಹಿಸುವ ಅಧಿಕಾರಿಗಳಿಗೆ ಸಂಬಂಧಿಸಿದಂತೆ ನಡೆದ ಪತ್ರ ವ್ಯವಹಾರದಿಂದ ಗೊತ್ತಾಗಿದೆ. ಏಪ್ರಿಲ್ 16 ನಿಶ್ಚಿತ ದಿನಾಂಕ ಅಲ್ಲದಿದ್ದರೂ ಏಪ್ರಿಲ್ ಗಡಿಯಲ್ಲಿ ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುವುದಂತು ನಿಜ.

ಆಡಳಿತರೂಢ ಬಿಜೆಪಿ 2024ರ ಲೋಕಸಭೆ ಚುನಾವಣೆಯ ಸಿದ್ಧತೆಯನ್ನು ಆರಂಭಿಸಿ ತಿಂಗಳುಗಳ ಕಳೆದಿವೆ. ಈ ಹಿಂದಿನ ಚುನಾವಣೆಯಂತೆ ಈ ಬಾರಿಯೂ ಭಾವನಾತ್ಮಕ ವಿಷಯವನ್ನು ಮುಂದಿಟ್ಟುಕೊಂಡು, ಕೇವಲ ಪ್ರಧಾನಿ ನರೇಂದ್ರ ಮೋದಿ ಅವರೊಬ್ಬರ ಸಾಧನೆಯೇ ಹೇಳಿಕೊಂಡು ಮತ ಕೇಳುವ ಕೆಲಸಕ್ಕೆ ಮುಂದಾಗಿದೆ. ಮೋದಿ ಬ್ರಾಂಡ್ ವ್ಯಾಲ್ಯೂ ನಂಬಿಕೊಂಡೆ ಬಿಜೆಪಿಗರು ಚುನಾವಣೆ ಎದುರಿಸಲು ಸಜ್ಜಾಗುತ್ತಿದ್ದಾರೆ.

ಆದರೆ ಜನವರಿ 25ರಿಂದಲೇ ಬಿಜೆಪಿ ಚುನಾವಣಾ ಪ್ರಚಾರಕ್ಕೆ ಅಣಿಯಾಗುತ್ತಿರುವುದನ್ನ ಸ್ಪಷ್ಟಪಡಿಸಿದೆ. ಉತ್ತರ ಪ್ರದೇಶದಿಂದಲೇ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರದ ಕಾರ್ಯಕ್ರಮ ಆರಂಭವಾಗಲಿದೆ. ಹಂತ ಹಂತವಾಗಿ ದೇಶದ ಇನ್ನಿತರ ರಾಜ್ಯಗಳಲ್ಲೂ ಪ್ರಧಾನಿ ಮೋದಿ ರೋಡ್ ಶೋಗಳು ನಡೆಯಲಿದೆ.

ಅದರಲ್ಲೂ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಇದೇ ಫೆಬ್ರವರಿ ತಿಂಗಳಲ್ಲಿ ಕೇಂದ್ರ ಬಜೆಟ್ ಮಂಡಿಸಲಿದ್ದು, ಬಜೆಟ್ ಮಂಡನೆ ನಂತರ ಬಿಜೆಪಿಯ ಚಿತ್ತ ಚುನಾವಣೆಯತ್ತ ಮುಖ ಮಾಡಲಿದೆ.

ಇನ್ನು ಪ್ರತಿಪಕ್ಷ ಕಾಂಗ್ರೆಸ್ ಸಹ ಚುನಾವಣೆಯ ತಯಾರಿಯಲ್ಲಿದೆ. ಇಂಡಿಯಾ ಮೈತ್ರಿಕೂಟದ ಮೂಲಕ ಈ ಬಾರಿ ಶತಾಯಗತಾಯ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಚಿಂತನೆಯೊಂದಿಗೆ ಹಲವಾರು ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳುತ್ತಿದೆ. ಹೀಗಾಗಿ ದೇಶದಲ್ಲಿ ಇನ್ನೇನಿದ್ದರೂ ಲೋಕಸಭೆ ಚುನಾವಣೆಯದ್ದೆ ಚರ್ಚೆ.

## ಪರೀಕ್ಷಾ ಸಂಭ್ರಮ–ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರೇರಣಾ ಕಾರ್ಯಾಗಾರ

# ವಿದ್ಯಾರ್ಥಿಗಳು ಸ್ವ ಮೌಲ್ಯಮಾಪನ ಮಾಡಿಕೊಳ್ಳಿ



**■ವಿಜಯಸಾಕ್ಷಿ ಸುದ್ದಿ, ಗದಗ**

ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಹಾಗೂ ನಿರಂತರ ಓದಿನಿಂದ ಎಂಥದೇ ಪರೀಕ್ಷೆಯಲ್ಲೂ ಉನ್ನತ ಸಾಧನೆ ಮಾಡಲು ಸಾಧ್ಯವಿದೆ. ವಿದ್ಯಾರ್ಥಿಗಳು ಪರೀಕ್ಷೆ ಕುರಿತು ಭಯ ತೆಗೆದುಹಾಕಿ ತಮ್ಮ ಓದಿನ ಬಗ್ಗೆ ಸ್ವಮೌಲ್ಯಮಾಪನ ಮಾಡಿಕೊಳ್ಳುವ ಮೂಲಕ ಪರೀಕ್ಷೆಗೆ ತಯಾರಾಗಬೇಕು ಎಂದು ಖ್ಯಾತ ಮನೋರೋಗ ತಜ್ಞ ಡಾ. ಆನಂದ ಪಾಂಡುರಂಗಿ ಹೇಳಿದರು.

ಅವರು ಜಗದ್ಗುರು ತೋಂಟದಾರ್ಯ ವಿದ್ಯಾಪೀಠ, ಹಿರೇಮಲ್ಲೂರ ಈಶ್ವರನ್ ಪಿಯು ಕಾಲೇಜ ಧಾರವಾಡ, ತೋಂಟದ ಸಿದ್ದೇಶ್ವರ ಪಿಯು ಕಾಲೇಜು ಗದಗ, ಹಾಗೂ ಜೆ.ಟಿ ಪಿಯು ಕಾಲೇಜು ಗಜೇಂದ್ರಗಡ ಇವರುಗಳ ಸಂಯುಕ್ತ ಆಶ್ರಯದಲ್ಲಿ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಶಿವಾನುಭವ ಮಂಟಪದಲ್ಲಿ ಜರುಗಿದ 'ಪರೀಕ್ಷಾ ಸಂಭ್ರಮ–ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರೇರಣಾ ಕಾರ್ಯಾಗಾರ'ಕ್ಕೆ ಚಾಲನೆ ನೀಡಿ ಮಾತನಾಡಿದರು.

ಎಸ್.ಎಸ್.ಎಲ್.ಸಿ, ಪಿಯುಸಿ ಹೀಗೆ ಜೀವನದುದ್ದಕ್ಕೂ ನಿರ್ಣಾಯಕ ಪರೀಕ್ಷೆಗಳು ಪದೇ ಪದೇ ಬಂದೇ ಬರುತ್ತವೆ. ಅವುಗಳನ್ನು ಧೈರ್ಯ ಹಾಗೂ ಆತ್ಮವಿಶ್ವಾಸದಿಂದ ಎದುರಿಸಿ ಭವಿಷ್ಯ ರೂಪಿಸಿಕೊಳ್ಳಬೇಕು. ಸಾಮಾನ್ಯ ಪರೀಕ್ಷೆಗಳಲ್ಲಿ ಫೇಲ್ ಆದರೂ ಜೀವನದ ಪರೀಕ್ಷೆಯಲ್ಲಿ ಫೇಲ್ ಆಗಬೇಡಿ ಎಂದು ಕಿವಿಮಾತು ಹೇಳಿದರಲ್ಲದೆ, ಪ್ರತಿಯೊಬ್ಬರಲ್ಲಿಯೂ ಅಗಾಧ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಬೇಕು, ಪ್ರೋತ್ಸಾಹಿಸಬೇಕು. ವಿದ್ಯಾರ್ಥಿಗಳು ಧನಾತ್ಮಕ ಮನೋಭಾವವುಳ್ಳ ಸಹಪಾಠಿಗಳ ಜೊತೆ ಹೆಚ್ಚು ಹೊತ್ತು ಕಳೆಯಬೇಕು, ಯಾವುದೇ ನಕಾರಾತ್ಮಕ ವಿಷಯಗಳ ಕುರಿತು ಯೋಚಿಸಬಾರದು ಎಂದರು.

ಮಕ್ಕಳಲ್ಲಿ ನಕಾರಾತ್ಮಕತೆ ಬೆಳೆಯುತ್ತಿದೆ ಎನ್ನುವುದು ಮೊದಲು ಗೊತ್ತಾಗುವುದು ಪಾಲಕರಿಗೆ. ಪಾಲಕರು ಮನೆಗಳಲ್ಲಿ ಹೆಚ್ಚೆಚ್ಚು ಜಾಗೃತವಾಗಿರಬೇಕು. ಮುಖ್ಯವಾಗಿ ಟಿವಿ, ಮೊಬೈಲ್‌ಗಳಿಂದ ಅವರನ್ನು ಸಾಧ್ಯದಾದಷ್ಟು ದೂರವಿಡಬೇಕು. ಓದನ್ನು ಮುಂದೂಡದೇ, ಸಮಯ ನಿರ್ವಹಣೆಗೆ ಒತ್ತು ನೀಡಿ ನಿರಂತರ ಪರಿಶ್ರಮದಿಂದ ಅಧ್ಯಯನಶೀಲರಾದಾಗ ಗುರಿ ಮುಟ್ಟಲು ಸಾಧ್ಯವಿದ್ದು, ಯಾವುದೇ ಆಕರ್ಷಣೆಗಳಿಗೆ ಒಳಗಾಗದೇ ಏಕಾಗ್ರತೆಯಿಂದ ಅಧ್ಯಯನಶೀಲರಾಗಲು ಕರೆ ನೀಡಿದರು.

ತೋಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟರ ಮಾತನಾಡಿ, ಆಧುನಿಕ ದಿನಗಳಲ್ಲಿ ಪ್ರತಿಯೊಬ್ಬರ ಮನಸ್ಸು ಸಾಕಷ್ಟು ಒತ್ತಡದಲ್ಲಿರುತ್ತದೆ. ಅದರಲ್ಲೂ ಹೆಚ್ಚುತ್ತಿರುವ ಸ್ಪರ್ಧಾತ್ಮಕತೆ ಮಕ್ಕಳನ್ನು ಇನ್ನೂ ಒತ್ತಡಕ್ಕೆ ಸಿಲುಕಿಸುತ್ತಿದೆ. ಒತ್ತಡ ನಿವಾರಿಸಿಕೊಳ್ಳಲು ಸಾಕಷ್ಟು ಮಾರ್ಗಗಳಿದ್ದು, ಯಾವುದೇ ಸಂದರ್ಭದಲ್ಲೂ ಎದೆಗುಂದದೆ ಧೈರ್ಯದಿಂದ ಬದುಕನ್ನು ಎದುರಿಸಬೇಕು. ಮಕ್ಕಳಲ್ಲಿ ಮಾನಸಿಕ ದೌರ್ಬಲ್ಯ ಹೆಚ್ಚಾಗುತ್ತಿದ್ದು, ಇದನ್ನು ಪಾಲಕರು ಸೂಕ್ಷ್ಮವಾಗಿ ಗಮನಿಸಬೇಕು. ಇಂತಹ ಪ್ರೇರಣೆ ಹಾಗೂ ಸ್ಫೂರ್ತಿ ನೀಡುವ ಈ ಕಾರ್ಯಕ್ರಮ ಎಸ್.ಎಸ್.ಎಲ್.ಸಿ ಮಕ್ಕಳಿಗೆ ಸಾಕಷ್ಟು ನೆರವಾಗಲಿದೆ. ಸಂಸ್ಥೆ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ನಿವೃತ್ತ ಡಿಡಿಪಿಐ ಐ.ಬಿ. ಬೆನಕೊಪ್ಪ ಸೇರಿದಂತೆ ಹಿರಿಯ ಅಧಿಕಾರಿಗಳು, ತೋಂಟದಾರ್ಯ ವಿದ್ಯಾಪೀಠದ ಹಿರಿಯರು ಹಾಜರಿದ್ದರು. ತೋಂಟದಾರ್ಯ ಶಾಲೆಯ ವಿದ್ಯಾರ್ಥಿಗಳು ವಚನ ಪ್ರಾರ್ಥನೆ ಹಾಡಿದರು. ಕೊಟ್ರೇಶ ಮೆಣಸಿನಕಾಯಿ ಕಾರ್ಯಕ್ರಮ ಆಯೋಜಿಸಿ, ನಿರ್ವಹಿಸಿದರು. ಜಿಲ್ಲೆಯ ವಿವಿಧ ತಾಲೂಕುಗಳಿಂದ 800ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಧಾರವಾಡದ ಹಿರೇಮಲ್ಲೂರನ್ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಶಶಿಧರ ತೋಡಕರ ಮಾತನಾಡಿ, ವಿದ್ಯಾರ್ಥಿಗಳು ದೇಶದ ಆಸ್ತಿಯಾಗಿದ್ದು, ನಿಮ್ಮಲ್ಲಿ ಅಕ್ಷರ ಜ್ಞಾನ ಎಂಬ ಬೀಜಗಳನ್ನು ಬಿತ್ತಿದರೆ ಅದೇ ದೊಡ್ಡ ಆಸ್ತಿಯಾಗಿ ಹೊರಹೊಮ್ಮುತ್ತದೆ. ವಿದ್ಯಾರ್ಥಿಗಳು ಪರೀಕ್ಷೆ ಸಿದ್ಧತೆಗೆ ಪೂರಕವಾಗಿ ಓದುವ ಕಲೆಯನ್ನು ಕರಗತ ಮಾಡಿಕೊಂಡರೆ ಪರೀಕ್ಷೆಯಲ್ಲಿ ನಿರೀಕ್ಷಿತ ಯಶಸ್ಸು ಸಾಧ್ಯ ಎಂದರು.

# ಶಕ್ತಿ ಮಂದಿರ ದೇವಸ್ಥಾನದಲ್ಲಿ ದೀಪೋತ್ಸವ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಬೇವಿನಮರದ ಓಣಿಯ ಶಕ್ತಿ ಮಂದಿರ ದೇವಸ್ಥಾನದಲ್ಲಿ ಅಯೋಧ್ಯೆ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆಯ ನಿಮಿತ್ತ ನವಗ್ರಹ ಶಾಂತಿ, ಮೃತ್ಯುಂಜಯ ಸಹಿತ ದುರ್ಗಾ ಹೋಮ, ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ ನೆರವೇರಿತು.

ಪಟ್ಟಣದ ಜಗದ್ಗುರು ರೇಣುಕಾಚಾರ್ಯ ರುದ್ರ ಬಳಗ ಮಹಿಳೆಯರಿಂದ ರುದ್ರಪಠಣ, ರಾಮನಾಮ ಜಪ ಹಾಗೂ ಮಂತ್ರ ಘೋಷಗಳು ಮೊಳಗಿದವು. ಸಂಜೆ ಶಕ್ತಿ ಮಂದಿರ ಸೇವಾ ಸಮಿತಿ ಹಾಗೂ ಮಹಿಳಾ ಮಂಡಳದಿಂದ ದೀಪೋತ್ಸವ ಕಾರ್ಯಕ್ರಮ ನಡೆಯಿತು. ರೈತ ಮುಖಂಡ ಬಸವರಾಜ ಬೆಂಡಿಗೇರಿ, ಹಿರಿಯರಾದ ಮಹಾಬಲೇಶ್ವರಪ್ಪ ಬೇವಿನಮರದ ಭಕ್ತರನ್ನುದ್ದೇಶಿಸಿ ಮಾತನಾಡಿದರು.

ಈ ವೇಳೆ ತಿಪ್ಪಣ್ಣ ತಳಕಲ್, ಬಸವರಾಜ ನಾಗಲೋಟಿ, ಈರಣ್ಣ ಹುಲಕೋಟಿ, ಮಂಜು ಬೇವಿನಮರದ, ಮಂಜು ನೂಲ್ವಿ, ಶಂಕರ ಸಜ್ಜನ, ಅಶೋಕ ಬೇವಿನಮರದ, ಈಶಣ್ಣ ರೋಣದ, ಸರೋಜಾ ಬನ್ನೂರ, ಶೈಲಾ ಆದಿ ಸೇರಿದಂತೆ ಭಕ್ತಾದಿಗಳು ಪಾಲ್ಗೊಂಡಿದ್ದರು.

# ಶಾಸಕ ಜಿ.ಎಸ್. ಪಾಟೀಲರಿಗೆ ಮನವಿ



**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ, ಮುಂಡರಗಿ ತಾಲೂಕು ಶಾಖೆಯ ನೇತೃತ್ವದಲ್ಲಿ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲರಿಗೆ ಮನವಿ ಸಲ್ಲಿಸಿದರು.

ನೂತನ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೆಯ ಪಿಂಚಣಿ ಯೋಜನೆಯನ್ನು ಮರು ಸ್ಥಾಪಿಸುವುದು, ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸುವಂತೆ ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸುವಂತೆ ಮಾನ್ಯರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಜಿ.ಎಸ್. ಪಾಟೀಲ, 7ನೇ ವೇತನ ಆಯೋಗವನ್ನು ಜಾರಿಗೊಳಿಸುವುದು ಹಾಗೂ ಹಳೆ ಪಿಂಚಣಿ ಯೋಜನೆಯನ್ನು ಮರು ಸ್ಥಾಪಿಸುವದು ನಮ್ಮ ಜವಾಬ್ದಾರಿಯಾಗಿದೆ. ಈ ಸಂಬಂಧ ಸರ್ಕಾರದ ಗಮನ ಸೆಳೆಯುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವಿವಿಧ ಸಂಘಗಳ ಪ್ರಮುಖರಾದ ನಾಗರಾಜ ಹಳ್ಳಿಕೇರಿ, ಶಂಕರ ಸರ್ವದೆ, ವಿ.ವಿ. ದಿಬ್ಬದಮನಿ, ಮಲ್ಲಿಕಾರ್ಜುನ ಕಲಕಂಬಿ, ಮಹಾಂತೇಶ್ ಖೋತ, ಶಿವಕುಮಾರ ಸಜ್ಜನರ, ಎಂ.ಹೆಚ್. ಸವದತ್ತಿ, ಬಿ.ಬಿ. ನಿಡಗುಂದಿ, ಎ.ಡಿ. ಬಂಡಿ, ಮಹಾಂತೇಶ ಹಲವಾಗಲಿ, ಕಾಶೀನಾಥ ಶಿರಬಡಗಿ, ಎಲ್.ಆರ್. ನಾಯಕ್, ವಿ.ಎನ್. ಪೂಜಾರ, ಶಿವಯೋಗಿ ಕಲ್ಮಠ, ಹನುಮಂತರೆಡ್ಡಿ ಇಟಗಿ, ಚಿದಾನಂದ ವಡ್ಡರ, ಎಂ.ಎಂ. ಬಂಡಿ, ಎಂ.ಪಿ. ಶೀರನಹಳ್ಳಿ, ಎನ್.ಎಂ. ಕುಕನೂರ, ವಿ.ಎ. ಕುಂಬಾರ, ವಿಶ್ವನಾಥ ಉಳ್ಳಾಗಡ್ಡಿ, ಎಚ್.ಜೆ. ಪವಾರ, ಬಸವರಾಜ ಮೇಗಳಮನಿ, ಶಂಕರಗೌಡ ಹೊಸಮನಿ, ಮಹಾಂತೇಶ ಕೋನೇರಿ, ಯಲ್ಲಪ್ಪ ದಡವಾಡ, ಎ.ಎಮ್. ಪೂಜಾರ, ಮಂಜು ಹೆಚ್, ಹುಸೇನ ಕವಲೂರು, ಚಂದ್ರಶೇಖರ ಕಟ್ಟಿಮನಿ, ಸಂತೋಷ ಜಾದವ, ಸುನಿಲ್, ಅಕ್ಷಯ ಮುಂತಾದವರಿದ್ದರು.



**■ವಿಜಯಸಾಕ್ಷಿ ಸುದ್ದಿ, ಬೆಟಗೇರಿ**

ಮುಂಬರುವ ಲೋಕಸಭಾ ಚುನಾವಣೆಯ ನಿಮಿತ್ತ ಬೆಟಗೇರಿ ಪೊಲೀಸ್ ಠಾಣಾ ವ್ಯಾಪ್ತಿಯ ಸೂಕ್ಷ್ಮ ಹಾಗೂ ಅತಿಸೂಕ್ಷ್ಮ ಪ್ರದೇಶಗಳಲ್ಲಿ ಆರ್‌ಎಎಫ್ ತುಕಡಿ ಹಾಗೂ ಬೆಟಗೇರಿ ಠಾಣೆಯ ಪೊಲೀಸರು ರೂಟ್ ಮಾರ್ಚ್ ಮಾಡಿದರು.

## ಶಂಕರಮಠದಲ್ಲಿ ಕೋಟಿ ರಾಮನಾಮ ಜಪ ಸಾಂಗತಾ ರಾಮತಾರಕ ಹೋಮ

# ನಾವೆಲ್ಲ ಹಿಂದೂ ಎಂಬ ಭಾವನೆಯಿರಲಿ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಅಯೋಧ್ಯೆಯಲ್ಲಿ ಶ್ರೀರಾಮನ ಮೂರ್ತಿ ಪ್ರತಿಷ್ಠಾಪನೆ ನಿಮಿತ್ತ ಸೋಮವಾರ ಶಂಕರಮಠದಲ್ಲಿ ಕೋಟಿ ರಾಮನಾಮ ಜಪದ ಸಾಂಗತಾ ನಿಮಿತ್ತ ರಾಮತಾರಕ ಹೋಮ ನೆರವೇರಿತು. ಸೇರಿದ್ದ ನೂರಾರು ರಾಮಭಕ್ತರ ಸಮ್ಮುಖದಲ್ಲಿ ಜೈ ಶ್ರೀರಾಮ್ ಘೋಷಣೆಯೊಂದಿಗೆ ಬ್ರಾಹ್ಮಣ ಸಮಾಜದ ಮುಖಂಡ ವಿ.ಎಲ್. ಪೂಜಾರ ದಂಪತಿಗಳು ಪೂರ್ಣಾಹುತಿಯನ್ನು ಅರ್ಪಿಸಿದರು.

ಕಳೆದ ದತ್ತ ಜಯಂತಿಯಿಂದ ಇಲ್ಲಿಯವರೆಗೆ ಕೋಟಿ ರಾಮನಾಮ ಜಪ ಸಂಕಲ್ಪ ಮಾಡಿದ್ದ ಬ್ರಾಹ್ಮಣ ಸಮಾಜದವರು ಎಲ್ಲ ಸಮಾಜಗಳ ಸಹಯೋಗದೊಂದಿಗೆ ಈ ಹೊಮವನ್ನು ಸಾಕಾರಗೊಳಿಸಿ ಪ್ರಭು ಶ್ರೀರಾಮಚಂದ್ರನ ಸನ್ನಿಧಿಗೆ ಅರ್ಪಿಸಿದರು. 9 ಗಂಟೆಗೆ ಪ್ರಾರಂಭವಾದ ಹೊಮ 12 ಗಂಟೆಗೆ ಪೂರ್ಣಾಹುತಿಯೊಂದಿಗೆ ಸಮಾಪ್ತಿಗೊಂಡಿತು. ಇದೇ ಸಂದರ್ಭದಲ್ಲಿ 1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಕರಸೇವಕರಾಗಿ ಪಾಲ್ಗೊಂಡಿದ್ದ ಪಟ್ಟಣದ ಭರಮಣ್ಣ ಗುಡಗೇರಿ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಗಂಗಣ್ಣ ಮಹಾಂತಶೆಟ್ಟರ, ಅಯೋಧ್ಯೆಯಲ್ಲಿ ಶ್ರೀ ರಾಮಚಂದ್ರ ಪ್ರಭುವಿಗೆ ಭವ್ಯ ದೇಗುಲ ನಿರ್ಮಾಣಗೊಂಡಿದೆ. ನಮ್ಮಲ್ಲಿರುವ ಜಾತಿ–ಮತ, ಪಂಥಗಳನ್ನು ಕೈಬಿಟ್ಟು ನಾವೆಲ್ಲ ಹಿಂದೂ ಎನ್ನುವ ಭಾವನೆಯಿಂದ ಮುಂದಿನ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಿ ಎಂದರು.

ಬ್ರಾಹ್ಮಣ ಸಮಾಜ ಹಿರಿಯರಾದ ವಿ.ಎಲ್. ಪೂಜಾರ ಮಾತನಾಡಿದರು. ಕಾರ್ಯಕ್ರಮಕ್ಕೆ ಶಾಸಕ ಡಾ.ಚಂದ್ರು ಲಮಾಣಿ, ಮಾಜಿ ಶಾಸಕರಾದ ಜಿ.ಎಸ್. ಗಡ್ಡದೇವರಮಠ, ರಾಜು ಕುಂಬಿ, ಮಹೇಶ ಹೊಗೆಸೊಪ್ಪಿನ, ಶರಣು ಅಂಗಡಿ, ನಿಂಗಪ್ಪ ಬನ್ನಿ, ಚಂಬಣ್ಣ ಬಾಳಿಕಾಯಿ, ಸಿದ್ದನಗೌಡ ಬಳ್ಳೊಳ್ಳಿ, ರಾಜರತ್ನ ಹುಲಗೂರ, ವಿಜಯ ಹತ್ತಿಕಾಳ, ಗಂಗಾಧರ ಮೆಣಸಿನಕಾಯಿ, ಸಮಾಜ ಬಾಂಧವರಾದ ಗೋಪಾಲ ಪಡ್ನೀಸ್, ಕೃಷ್ಣ ಕುಲಕರ್ಣಿ, ಎಸ್.ಜಿ. ಹೊಂಬಳ, ವೆ.ಮೂ. ಬಾಲಚಂದ್ರಶಾಸ್ತ್ರೀಗಳು ಹುಲಮನಿ, ನಾರಾಯಣಭಟ್ ಪುರಾಣಿಕ, ಅರವಿಂದ ದೇಶಪಾಂಡೆ, ಕೆ.ಎಸ್. ಕುಲಕರ್ಣಿ, ಧ್ರುವರಾಜ ಬೆಟಗೇರಿ, ವೆಂಕಟೇಶ ಗುಡಿ, ಶಂಕರ ಬೆಟಗೇರಿ, ಆರ್.ಎನ್. ಪಂಚಬಾವಿ, ಬಿ.ಕೆ. ಕುಲಕರ್ಣಿ, ಎ.ಪಿ. ಕುಲಕರ್ಣಿ, ಗುರುರಾಜ ಪಾಟೀಲಕುಲಕರ್ಣಿ, ರಾಜು ಹುಲಮನಿ, ಡಾ. ಪ್ರಸನ್ನ ಕುಲಕರ್ಣಿ, ಕೃಷ್ಣಕುಮಾರ ಕುಲಕರ್ಣಿ, ದಿಗಂಬರ ಪೂಜಾರ ಸೇರಿದಂತೆ ಅನೇಕರಿದ್ದರು.

# ಜಲಾಶಂಕರದಲ್ಲಿ ವಿಶೇಷ ಪೂಜೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ನಾಗಾವಿ ತಾಂಡಾ ಬಳಿಯ ಶ್ರೀ ಕ್ಷೇತ್ರ ದಕ್ಷಿಣ ಕಾಶಿ ಜಲಾಶಂಕರ ದೇವಸ್ಥಾನದಲ್ಲಿ ಅಯೋಧ್ಯೆ ಶ್ರೀರಾಮ ಮಂದಿರ ಲೋಕಾರ್ಪಣೆ ನಿಮಿತ್ತ ಜ.22ರಂದು ಬೆಳಿಗ್ಗೆ 6.30ಕ್ಕೆ ಜಲಾಶಂಕರ ದೇವರಿಗೆ ಕ್ಷೀರಾಭಿಷೇಕ, ಬಿಲ್ವಾರ್ಚನೆ ನೆರವೇರಿಸಲಾಯಿತು.

ದೇವಸ್ಥಾನದ ಅರ್ಚಕರಾದ ವೇ. ಮೂ. ಮಲ್ಲಯ್ಯಸ್ವಾಮಿ ಅಂಗಡಿ (ಹಿರೇಮಠ) ಇವರು ಪೂಜೆ ನೆರವೇರಿಸಿದರು. ಭಕ್ತಿ ಸೇವೆಯನ್ನು ಟ್ರಸ್ಟ್ ಕಮಿಟಿ ಅಧ್ಯಕ್ಷ ಗಣೇಶ ಪಾಂಡಪ್ಪ ಲಮಾಣಿ ಹಾಗೂ ಸರ್ವ ಸದಸ್ಯರು, ಕುಟುಂಬದವರು ನೆರವೇರಿಸಿದರು. ಸುಭಾಸ ಲಮಾಣಿ, ಶ್ರೀಕಾಂತಸಾ ಮೆರವಾಡೆ, ರಾಘವೇಂದ್ರಸಾ ಭಾ. ಮೆರವಾಡೆ, ವಿಷ್ಣು ಕಲಘಟಗಿ, ಸೋಮಶೇಖರ ಚಪ್ಪನಮಠ, ಬಸವರಾಜ ಹರ್ತಿ, ಸಿದ್ದಲಿಂಗೇಶ ದೇವೇಂದ್ರಪ್ಪ ಮೂರಶಿಳ್ಳಿನ, ನವರತ್ನ ಜ್ಯುವೆಲರ್ಸ್ ಗದಗ, ಶ್ರೀಶೈಲ ವೀರಪ್ಪ ಅಜನಾಳ ಲಕ್ಕುಂಡಿ, ಮಂಜುನಾಥ ಗದಗಿನ, ಮೋಹನ ಭಜಂತ್ರಿ ವಕೀಲರು, ಸಿ.ಎಸ್. ಹುಣಸೀಮರದ ಕುಟುಂಬದವರು ಹಾಗೂ ಭಕ್ತಾಧಿಗಳು ಪಾಲ್ಗೊಂಡರು.

# ಶ್ರೀ ಪವಾಡ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ



**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಶ್ರೀ ಪವಾಡ ಆಂಜನೇಯ ದೇವಸ್ಥಾನದಲ್ಲಿ ರಾಮೋತ್ಸವವನ್ನು ಶ್ರದ್ಧಾ–ಭಕ್ತಿಯಿಂದ ನೆರವೇರಿಸಲಾಯಿತು.

ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಶ್ರೀ ರಾಮಚಂದ್ರನಿಗೆ ಹಾಗೂ ಶ್ರೀ ಪವಾಡ ಆಂಜನೇಯಸ್ವಾಮಿಗೆ ವಿಶೇಷ ರುದ್ರಾಭಿಷೇಕ, ಬಿಲ್ವಾರ್ಚನೆ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು.

ಸಾಯಂಕಾಲ ಸಾಮೂಹಿಕ ಹನುಮಾನ ಚಾಲಿಸ್ ಪಠಣ, ರಾಮನಾಮ ಜಪ, ಭಜನೆ, ಭಕ್ತಿಗೀತೆಗಳನ್ನು ಭಕ್ತರು ಹಾಡಿದರು. ನಂತರ ದೀಪೋತ್ಸವ ಜರುಗಿತು.

ಕಾರ್ಯಕ್ರಮದಲ್ಲಿ ವೀರ ಸೋಮೇಶ್ವರ ನಗರ ಹಾಗೂ ನಿಸರ್ಗ ಬಡಾವಣೆಯ ಸಮಿತಿ ಅಧ್ಯಕ್ಷ ಶಿವಾನಂದಯ್ಯ ಸಿ.ಹಿರೇಮಠ, ಉಪಾಧ್ಯಕ್ಷ ಬಸನಗೌಡ ಎಂ.ಕರಿಗೌಡ್ರ, ಕಾರ್ಯದರ್ಶಿ ಬಸವರಾಜ ಎಸ್.ತಮ್ಮನಗೌಡ್ರ, ಖಜಾಂಚಿ ಬಸವಣ್ಣೆಪ್ಪ ಎಂ.ಗಾಣಿಗೇರ, ಸದಸ್ಯರಾದ ತೋಟಪ್ಪ ಎಂ.ಮಾಗಳದ, ಪ್ರದೀಪ ವಿ.ನಂದಿಶೆಟ್ರ, ಶಿವಪ್ಪ ಕಟಗಿ, ವೀರೇಶ ಶಿರೂರ, ಕುಮಾರಸ್ವಾಮಿ ಹಿರೇಮಠ, ಬಸವರಾಜ ಬಳ್ಳಾರಿ, ಲೋಕೇಶ ಎಚ್, ಉಮೇಶ ಸಿ.ಕಮತರ, ಬಸವರಾಜ ಎಸ್.ವಾಲಿ ಸೇರಿದಂತೆ ಭಕ್ತಾದಿಗಳು ಪಾಲ್ಗೊಂಡಿದ್ದರು.

# ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಹಿಂಪಡೆಯಿರಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಫೆಬ್ರುವರಿ ಬಜೆಟ್‌ನಲ್ಲಿ ಎಂಡಿಎಂಗೆ ಅನುದಾನ ಹೆಚ್ಚಳ ಮತ್ತು ಕನಿಷ್ಠ ವೇತನವನ್ನು ಘೋಷಿಸುವಂತೆ ಒತ್ತಾಯಿಸಿ ಸಂಸದರ ಕಛೇರಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ ಜಿಲ್ಲಾ ಸಮಿತಿ ವತಿಯಿಂದ ಮನವಿಯನ್ನು ಸಂಸದರ ಪರವಾಗಿ ಅವರ ಆಪ್ತ ಕಾರ್ಯದರ್ಶಿಗೆ ಸಲ್ಲಿಸಲಾಯಿತು.

ಯಶೋಧಾ ಬೆಟಗೇರಿ ಮಾತನಾಡಿ, ಕೆಲಸದ ಅವಧಿ ಹೆಚ್ಚಿಸುವ ಮಹಿಳೆಯರನ್ನು ರಾತ್ರಿಪಾಳಿಯಲ್ಲಿ ದುಡಿಸಿಕೊಳ್ಳಲು ಅವಕಾಶ ನೀಡುವುದು ಸೇರಿದಂತೆ ಎಲ್ಲ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ವಾಪಸ್ ಪಡೆಯಬೇಕು. ಎಲ್ಲ ಬಿಸಿಯೂಟ ನೌಕರರನ್ನು ಉದ್ಯೋಗಸ್ಥರೆಂದು ಪರಿಗಣಿಸಿ ಗ್ರಾಚ್ಯುಟಿ ಕಾಯ್ದೆಯನ್ನು ದೇಶದೆಲ್ಲೆಡೆ ಜಾರಿ ಮಾಡಬೇಕು. ರೈತ ವಿರೋಧಿ ಕೃಷಿ ಕಾನೂನುಗಳನ್ನು ವಾಪಸ್ ಪಡೆಯಬೇಕು. ಕೃಷಿ ಬೆಳೆಗಳಿಗೆ ಲಾಭದಾಯಕ ಬೆಂಬಲ ಖಾತರಿಪಡಿಸಬೇಕು. ಎಪಿಎಮ್‌ಸಿ ವ್ಯವಸ್ಥೆಯನ್ನು ಬಲಗೊಳಿಸಬೇಕು. ಗೊಬ್ಬರ ಸೇರಿದಂತೆ ಕೃಷಿ ಇಡುವಳಿಗಳಿಗೆ ಸಬ್ಸಿಡಿ ಕಡಿತಗೊಳಿಸುವ ನೀತಿಗಳನ್ನು ಕೈ ಬಿಡಬೇಕು ಇವೇ ಮುಂತಾದ ಬೇಡಿಕೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಹೇಶ ಹಿರೇಮಠ, ಯಶೋಧಾ ಬೆಟಗೇರಿ, ಪೀರು ರಾಠೋಡ, ಮಂಜುಳಾ ಮುಳ್ಳೂರು, ನಾಗರತ್ನ ಬಡಿಗಣ್ಣವರ, ವಿಜಯಲಕ್ಷ್ಮೀ ಚಲವಾದಿ, ರೇಣುಕಾ ತಳವಾರ, ಪ್ರೇಮಾ ಪೂಜಾರ, ಗಿರಿಜಾ ಗಾಣಿಗೇರ, ಕೇಶಮ್ಮ ರಾಠೋಡ, ವಿಜಯಲಕ್ಷ್ಮೀ ಕುಂದಗೋಳ, ನೀಲಂಬಿಕಾ ಯಚ್ಚಲಗಾರ, ಲಕ್ಷ್ಮವ್ವ ಚಿಲಕವಾಡ ಸೇರಿದಂತೆ ಅಕ್ಷರ ದಾಸೋಹ ನೌಕರರು ಉಪಸ್ಥಿತರಿದ್ದರು.

# ಚಿತ್ರದುರ್ಗದಲ್ಲಿ 7ನೇ ಸಾಂಸ್ಕೃತಿಕ ಸಮ್ಮೇಳನ ಜ.27ಕ್ಕೆ

■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕುಕನೂರಿನ ಕನ್ನಡ ಸಾಹಿತ್ಯ ಅಭಿವೃದ್ಧಿ ಟ್ರಸ್ಟ್ ಹಾಗೂ ಚಿತ್ರದುರ್ಗದ ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ಸಹಯೋಗದಲ್ಲಿ ಜ.27ರಂದು ಚಿತ್ರದುರ್ಗದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ 7ನೇ ಸಾಂಸ್ಕೃತಿಕ ಸಮ್ಮೇಳನ ಜರುಗಲಿದೆ ಎಂದು ಸಂಚಾಲಕರಾದ ರುದ್ರಪ್ಪ ಭಂಡಾರಿ ಹಾಗೂ ಡಾ. ಶಫಿ ಉಲ್ಲ ತಿಳಿಸಿದ್ದಾರೆ.

ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸತ್ಯಪ್ರಭಾ ವಸಂತಕುಮಾರ್ ಆಯ್ಕೆಯಾಗಿದ್ದಾರೆ. ಕಾರ್ಯಕ್ರಮದಲ್ಲಿ ವೈಷ್ಣವಿ ಜೋಷಿ ಇವರಿಂದ ಭರತನಾಟ್ಯ, ಕುಕನೂರಿನ ಮುರಾರಿ ಭಜಂತ್ರಿಯವರಿಂದ ಸುಗಮ ಸಂಗೀತ, ದೇವಪ್ಪ ಹರಿಜನ ಅವರಿಂದ ಜನಪದ ಗಾಯನ, ವೀರಭದ್ರಪ್ಪ ಬೆದವಟ್ಟಿ ಅವರಿಂದ ವಚನ ಸಂಗೀತ, ಡಾ. ಹನಮಂತಪ್ಪ ಅಂಡಗಿ ಚಿಲವಾಡಗಿ ಅವರಿಂದ ಜನಪದ ಗಾಯನ ಜರುಗಲಿದೆ.

ಹುಬ್ಬಳ್ಳಿಯ ದುರ್ಗಾ ಭಜನಾ ಮಂಡಳಿಯಿಂದ ಕೋಲಾಟ ಹಾಗೂ ಭಜನಾ ಪದಗಳು, ಗಂಗಾಧರ ಅವರಿಂದ ಜನಪದ ಗಾಯನ ನಡೆಯಲಿವೆ. ಸಮ್ಮೇಳನದಲ್ಲಿ ಸಂಸ್ಥಾನ ಕೋಡಿಮಠ, ತಳ್ಳಿಹಾಳ-ಗಜೇಂದ್ರಗಡದ ಡಾ. ಶ್ರೀ ಶರಣಬಸವೇಶ್ವರ ಮಹಾಸ್ವಾಮಿಗಳು ಹಾಗೂ ಉಡುಪಿಯ ದೊಡ್ಡನಗುಡ್ಡೆಯ ಆದಿಶಕ್ತಿ ದುರ್ಗಾ ಕ್ಷೇತ್ರದ ಪೀಠಾಧ್ಯಕ್ಷರಾದ ರಮಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಚಿತ್ರದುರ್ಗದ ಹಿರಿಯ ನ್ಯಾಯವಾದಿ ಬಿ.ಕೆ. ರೆಹಮತ್ ಉಲ್ಲಾ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ವಿ.ಆರ್. ನಾರಾಯಣ ರೆಡ್ಡಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ರಮೇಶ್ ಸುರ್ವೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಮಾಪತಿ, ಪರಶುರಾಮ ಗೊರಪ್ಪರ್, ಎಂ.ಎಚ್. ಉಜ್ಜಮ್ಮನವರ್, ದಯಾ ಪುತ್ತೂರಕರ್, ಕೊರ್ಲಕುಂಟೆ ತಿಪ್ಪೇಸ್ವಾಮಿ, ಶರಣಪ್ಪ ಕೊಪ್ಪದ, ಎಫ್.ಎಂ. ಕಳ್ಳಿ, ಮಹಾದೇವಿ ಕಂಬಳಿ, ಸುಮಾ ಕೋಡಿಹಳ್ಳಿ, ಶರಣೇಗೌಡ ಯರದೊಡ್ಡಿ, ಶಶಿಕುಮಾರ್ ಎಂ.ಎ, ಬಸವರಾಜ ಕೊಳ್ಳಿ ಆಗಮಿಸಲಿದ್ದಾರೆ.

## ದೆಹಲಿ ಗಣರಾಜ್ಯೋತ್ಸವಕ್ಕೆ ತೆರಳಲಿದ್ದಾಳೆ ಲಕ್ಷ್ಮೇಶ್ವರದ ಕುವರಿ

# ರಿದಾಗೆ ಪ್ರಧಾನಮಂತ್ರಿ ಕಚೇರಿಯಿಂದ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜ.26ರಂದು ದೆಹಲಿಯಲ್ಲಿ ನಡೆಯಲಿರುವ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಆತಿಥ್ಯ ವಹಿಸಲು ಗದಗ ಜಿಲ್ಲೆ ಲಕ್ಷ್ಮೇಶ್ವರದ ವಿದ್ಯಾರ್ಥಿನಿ ರಿದಾ ಅಲ್ಲಾಭಕ್ಷ ನಧಾಪ್ ಅವರಿಗೆ ಪ್ರಧಾನಮಂತ್ರಿ ಕಚೇರಿಯಿಂದ ಅಧಿಕೃತ ಆಹ್ವಾನ ಬಂದಿದೆ.

ರಿದಾ 2017ರಲ್ಲಿ, ಇಂದಿಗೆ 7 ವರ್ಷಗಳ ಹಿಂದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ನೋಟ್ ರದ್ದತಿ ವಿಷಯದ ಕುರಿತು ಪತ್ರ ಬರೆದಿದ್ದಳು. ಪತ್ರದಲ್ಲಿ ಪ್ರಧಾನಿಗಳು ದೇಶದ ಪ್ರಗತಿಗಾಗಿ ನೋಟು ರದ್ದತಿ ಸೇರಿ ಕೈಗೊಂಡ ಕ್ರಾಂತಿಕಾರಿ ಬದಲಾವಣೆಗಳು, ದೇಶದ ಕಾಯುವ ಸೈನಿಕರು, ರೈತರ ಬಗೆಗಿನ ಕಾಳಜಿ, ವಿದ್ಯಾರ್ಥಿಗಳು, ಬಡವರು ಸೇರಿ ಎಲ್ಲ ವರ್ಗದ ಮೇಲಿರುವ ಅವರ ಪ್ರೀತಿ, ಅವರ ಸರಳ ವ್ಯಕ್ತಿತ್ವದ ಬಗ್ಗೆ ಮೆಚ್ಚುಗೆ ಮತ್ತು ತಮ್ಮನ್ನು ನೇರವಾಗಿ ಭೇಟಿಯಾಗುವ ಕನಸು-ಹಂಬಲದ ಬಗ್ಗೆ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದ್ದಳು.

ಆ ಬಳಿಕ ಪ್ರಧಾನಮಂತ್ರಿಗಳು ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದ ತಮ್ಮ ಭಾಷಣದಲ್ಲಿ ರಿದಾಳ ಹೆಸರನ್ನು ಪ್ರಸ್ತಾಪಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಹೆಸರು ಪ್ರಸ್ತಾಪಿಸಿದ್ದ ಅನೇಕ ಗಣ್ಯರನ್ನು ಗಣರಾಜ್ಯೋತ್ಸವಕ್ಕೆ ಆಹ್ವಾನ ನೀಡಿದ್ದು, ಅದರಲ್ಲಿನ ಅದೃಷ್ಟಶಾಲಿ ರಿದಾ



ಒಬ್ಬಳಾಗಿದ್ದಾಳೆ. ರಿದಾ ಪ್ರಸ್ತುತ ಬಿಎಸ್‌ಸಿ ಅಗ್ರಿ ಪ್ರಥಮ ವರ್ಷದಲ್ಲಿ ಓದುತ್ತಿದ್ದು, ತಂದೆ ಅಲ್ಲಾಭಕ್ಷಿ ನಧಾಪ್ 20 ವರ್ಷಗಳ ಕಾಲ ಸೇನೆಯಲ್ಲಿ ಸೇವೆ ಸಲ್ಲಿಸಿ ಈಗ ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜ.24ರಂದು ಹುಬ್ಬಳ್ಳಿಯಿಂದ ವಿಮಾನದ ಮೂಲಕ ತಂದೆಯೊಂದಿಗೆ ಹೊರಡಲು ಪ್ರಧಾನಮಂತ್ರಿ ಕಚೇರಿಯಿಂದಲೇ ವಿಮಾನ ಪ್ರಯಾಣದ ಟಿಕೆಟ್ ಸೇರಿ ವಸತಿ, ಊಟ ಎಲ್ಲ ವ್ಯವಸ್ಥೆಯೊಂದಿಗೆ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಪ್ರಧಾನಮಂತ್ರಿಗಳ ಭೇಟಿ-ಮಾತುಕತೆ ಮತ್ತು ದೆಹಲಿ ಭಾಗದ ಪ್ರವಾಸ ಸ್ಥಳಗಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ.

ಮಗಳು ರಿದಾ ಅವಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಗ್ಗೆ ಅತ್ಯಂತ ಪ್ರೀತಿ. ಅವರನ್ನು ಖುದ್ದಾಗಿ ಭೇಟಿಯಾಗಿ ಮಾತನಾಡಬೇಕು ಎಂಬ ಆಸೆ ಅವಳದಾಗಿತ್ತು. ಇದೀಗ ಅವಳಿಗೆ ಭಾರತದ ಶ್ರೇಷ್ಠ ಹಬ್ಬ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿರುವುದು ಸ್ವರ್ಗಕ್ಕೆ ಮೂರೇ ಗೇಣು ಎಂಬಷ್ಟು ಸಂತಸ ನಮ್ಮೆಲ್ಲರದ್ದಾಗಿದೆ. ಮಗಳ ಆಮಂತ್ರಣದ ವಿಷಯ ಕೇಳಿ ಅತ್ಯಂತ ಸಂತಸವಾಗಿದೆ. 20 ವರ್ಷ ಸೈನಿಕನಿದ್ದಾಗಲೂ ಸಿಗದ ಭಾಗ್ಯ ಈಗ ನನಗೂ ಸಿಕ್ಕಿರುವುದು ಪುಣ್ಯವೇ ಸರಿ. ಪ್ರಧಾನಮಂತ್ರಿಗಳಿಗೆ ಹೃದಯಾಂತರಾಳದ ನಮನಗಳನ್ನು ಸಲ್ಲಿಸುತ್ತೇವೆ ಎನ್ನುತ್ತಾರೆ ಪಾಲಕರಾದ ಅಲ್ಲಾಭಕ್ಷ ನಧಾಪ್ ಹಾಗೂ ಶೈರಾ ನಧಾಪ್.

> ಪ್ರಧಾನಮಂತ್ರಿ ನರೇಂದ್ರ ಮೋದಿ ನಮ್ಮ ದೇಶದ ಹೆಮ್ಮೆ. ರಕ್ಷಣೆ, ಕೃಷಿ, ಶಿಕ್ಷಣ, ಕೈಗಾರಿಗೆ, ಸಾರಿಗೆ ಸೇರಿ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗಾಗಿ ಸಮರ್ಪಿಸಿಕೊಂಡಿರುವ ಅವರು ನಮ್ಮ ದೇಶದ ಶಕ್ತಿಯಾಗಿದ್ದಾರೆ. ವಿಶ್ವಮಾನ್ಯರಾದ ಅವರು ನನ್ನಂತಹ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಯನ್ನು ಗಮನಿಸಿ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಲು ಆಹ್ವಾನ ನೀಡಿರುವುದು ನನ್ನ ಪುಣ್ಯ ಮತ್ತು ಜನ್ಮ ಸಾರ್ಥಕತೆಯ ಕ್ಷಣವಾಗಿದೆ.
>
> **- ರೀದಾ ಅಲ್ಲಾಭಕ್ಷ ನದಾಫ್.**
> ಆಹ್ವಾನಿತ ವಿದ್ಯಾರ್ಥಿನಿ-ಲಕ್ಷ್ಮೇಶ್ವರ.

# ಅಕ್ರಮ ನೋಂದಣಿ ರದ್ದುಗೊಳಿಸಲು ಮನವಿ



■ ವಿಜಯಸಾಕ್ಷಿ ಸುದ್ದಿ, ಗದಗ

ಫಾರ ನಂ.3 ಇಲ್ಲದೆ ಆಸ್ತಿ ನೋಂದಣಿ ಮಾಡಿದ ನೋಂದಣಿ ಅಧಿಕಾರಿಗಳನ್ನು ಅಮಾನತುಗೊಳಿಸುವಂತೆ ಹಾಗೂ ಸದರಿ ನೋಂದಣಿಯನ್ನು ರದ್ದುಗೊಳಿಸುವಂತೆ ಗದಗ ಜಿಲ್ಲಾಧಿಕಾರಿಗಳಿಗೆ ಜೈ ಭೀಮ್ ಸಂಘರ್ಷ ಸಮಿತಿ ಗದಗ ಜಿಲ್ಲಾ ಘಟಕದ ವತಿಯಿಂದ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿ ಮಾತನಾಡಿದ ಸಮಿತಿಯ ಜಿಲ್ಲಾಧ್ಯಕ್ಷ ಗಣೇಶ ವಾಯ್. ಹುಬ್ಬಳ್ಳಿ, ಫಾರಂ ನಂ.3 ಇಲ್ಲದಿದ್ದರೆ ಯಾವುದೇ ನೋಂದಣಿ ಮಾಡಬಾರದೆಂದು ಆದೇಶ ಇದ್ದರೂ ಕೂಡ ಗದುಗಿನ ಹಿರಿಯ ಉಪನೋಂದಣಾಧಿಕಾರಿಗಳು ನಿಯಮ ಉಲ್ಲಂಘಿಸಿ ನೋಂದಣಿ ಮಾಡಿದ್ದಾರೆ.

ಇವರನ್ನು ಕೂಡಲೇ ಅಮಾನತು ಮಾಡಬೇಕು ಮತ್ತು ಅವರು ಫಾರ ನಂ. 3 ಇಲ್ಲದೆ ಮಾಡಿದ ನೋಂದಣಿಯನ್ನು ರದ್ದು ಮಾಡಬೇಕು ಎಂದು ವಿನಂತಿಸಿಕೊಂಡರು.

ಈ ಸಂದರ್ಭದಲ್ಲಿ ಜೈ ಭೀಮ ಸಂಘರ್ಷ ಸಮಿತಿಯ ಉಪಾಧ್ಯಕ್ಷ ಮಂಜುನಾಥ ಎಫ್. ತೌಜಲ್, ರೋಣ ತಾಲೂಕಾಧ್ಯಕ್ಷ ಬಸವರಾಜ ಬದಾಮಿ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ರಾಷ್ಟ್ರೀನ್ ಜೋಸೆಫ್, ಜಿಲ್ಲಾ ಉಪಾಧ್ಯಕ್ಷ ರಾಜೇಶ ವಿ.ಶೆಟ್ಟರ್, ಸಹ-ಕಾರ್ಯದರ್ಶಿ ಶಿವಣ್ಣ ಕಡಿವಾಲ ಉಪಸ್ಥಿತರಿದ್ದರು.

# ಭೀಷ್ಮ ಕೆರೆ ತಡೆಗೋಡೆ ನಿರ್ಮಾಣಕ್ಕೆ ಮನವಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಹೃದಯ ಭಾಗದಲ್ಲಿರುವ ಭೀಷ್ಮ ಕೆರೆಯ ಬಸವಣ್ಣನವರ ಮೂರ್ತಿಯ ಎದುರುಗಡೆ ಕಸ, ಕಂಟಿಗಳನ್ನು ಸ್ವಚ್ಛಗೊಳಿಸಿ, ಸುತ್ತ ತಡೆಗೋಡೆ ನಿರ್ಮಾಣಕ್ಕೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಗದಗ ಜಿಲ್ಲಾ ಕಾರ್ಮಿಕ ಘಟಕದ ವತಿಯಿಂದ ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು.




ಘಟಕದ ಪ್ರಧಾನ ಕಾರ್ಯದರ್ಶಿ ತೌಸಿಫ ಢಾಲಾಯತ ಮಾತನಾಡಿ, ಚಿಕ್ಕಮಕ್ಕಳು ಬರುವುದರಿಂದ ಭೀಷ್ಮಕರೆಗೆ ತಂತಿಯ ಬೇಲಿ ಅಥವಾ ತಡೆಗೋಡೆ ನಿರ್ಮಿಸಿ ಅಪಘಾತಗಳು ಸಂಭವಿಸದಂತೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ತಾಲೂಕಾಧ್ಯಕ್ಷ ದಾವಲಸಾಬ ತಹಶೀಲ್ದಾರ ಮಾತನಾಡಿ, ಸದರಿ ಅವ್ಯವಸ್ಥೆಯನ್ನು ಒಂದು ತಿಂಗಳದ ಒಳಗಾಗಿ ಸರಿಪಡಿಸದಿದ್ದರೆ ಕರವೇ ಕಾರ್ಮಿಕ ಘಟಕದ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಮುತ್ತಣ್ಣ ಚವಡಣ್ಣವರ, ಯುವ ಘಟಕದ ಉಪಾಧ್ಯಕ್ಷ ಕುಮಾರ ರ್‍ಯಾವಣ್ಣವರ, ಜಿಲ್ಲಾ ವಕ್ತಾರ ವಿರುಪಾಕ್ಷಪ್ಪ ಹಿತ್ತಲಮನಿ, ತಾಲೂಕು ಸಂಚಾಲಕ ಸಲೀಂ ಬೋದ್ಲೆಖಾನ, ಕಾರ್ಯದರ್ಶಿ ನಿಯಾಜ್ ಶೇಖ, ಕಾರ್ಮಿಕ ಘಟಕದ ಉಪಾಧ್ಯಕ್ಷ ಇರ್ಫಾನ ತಾಳಿಕೋಟಿ, ನಗರ ಘಟಕದ ಪ್ರ.ಕಾರ್ಯದರ್ಶಿ ಸಲೀಮ ಶಿರವಾರ, ಮುಳಗುಂದ ಘಟಕದ ಹುಸೇನ ಅಕ್ಕಿ, ಮುಸ್ತಾಕ ಡಾವಣಗೇರಿ, ಇಸಾಕ್ ನದಾಫ, ಗೌಸುಸಾಬ ಶಿರಹಟ್ಟಿ, ಸುಲೇಮಾನ ಮಂಜಾಲಪೂರ, ಮಹಾಂತೇಶ ನಡಗೇರಿ, ಸದಾಶಿವ ಸೊರಟೂರ, ಮುನ್ನಾ ಪಠಾಣ ಸೇರಿದಂತೆ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

# ನದಾಫ್ ಪಿಂಜಾರ ಸಂಘದ ಪದಾಧಿಕಾರಿಗಳ ಆಯ್ಕೆ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಕರ್ನಾಟಕ ರಾಜ್ಯ ನದಾಫ್ ಪಿಂಜಾರ ಸಂಘದ ತಾಲೂಕಾ ಕಾರ್ಯಕಾರಿ ಸಮಿತಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಮೇವುಂಡಿ ಗ್ರಾಮದ ವಕೀಲ ಮೌಲಾಸಾಬ ಇಮಾಮಸಾಬ್ ನದಾಫ್, ಉಪಾಧ್ಯಕ್ಷರಾಗಿ ರಸೂಲಸಾಬ ಕಿನ್ನಾಳ, ಪೀರಸಾಬ ನದಾಫ್, ರಾಜೇಸಾಬ ಸುಭಾನಸಾಬ, ಮಹಿಳಾ ಉಪಾಧ್ಯಕ್ಷೆ ರಮಜಾನಬಿ ಹೊಸಮನಿ, ಕಾರ್ಯದರ್ಶಿ ಮೆಹಬೂಬಸಾಬ ಕವಲೂರ, ಸಹಕಾರ್ಯದರ್ಶಿ ಪ್ರೇಮಸಾಬ ಹರ್ಲಾಪುರ, ಕೋಶಾಧಿಕಾರಿ ಸೈಯದಸಾಬ ಕೊಪ್ಪಳ, ಸಂಘಟನಾ ಕಾರ್ಯದರ್ಶಿಗಳಾಗಿ ಇಮಾಮಸಾಬ ಕಲ್ಲೂರ, ಹುಸೇನಸಾಬ ನದಾಫ್, ದಾವಲಸಾಬ ನದಾಫ, ಸಲಿಮಾಬೇಗಂ ನದಾಫ್, ಮುಂಡರಗಿ ತಾಲೂಕಿನಿಂದ ಜಿಲ್ಲಾ ಸದಸ್ಯರಾಗಿ ರಾಜಾಭಕ್ಷಿ ಹರ್ಲಾಪುರ, ರೈಹಮಾನಸಾಬ ನದಾಫ್, ಕುಮಾರಸಾಬ ಹಳ್ಳಿಗುಡಿ, ಬಾಲುಸಾಬ ನದಾಫ್, ರಾಜೇಸಾಬ ನದಾಫ್, ರಮಜಾನಸಾಬ ನದಾಫ್, ದಾವಸಾಬ ನದಾಫ್, ಹುಸೇನಸಾಬ ಕಂಪ್ಲಿಮನಿ, ಕಾಶಿಮಸಾಬ ನದಾಫ್, ಚಮನಸಾಬ ಜಂತ್ಲಿ, ಹೈದರಲಿಸಾಬ ವೆಂಕಟಾಪೂರ, ಪಕ್ರುದ್ದಿನ ಪಿಂಜಾರ, ಬಾಬುಸಾಬ ನದಾಫ್, ಮುಕ್ತಮಸಾಬ ನದಾಫ್, ಶರೀಪಸಾಬ ನದಾಫ್, ಅಲ್ಲಾಸಾಬ ನದಾಫ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ನದಾಫ್ ಪಿಂಜಾರ ಸಂಘದ ಪ್ರಕಟಣೆ ತಿಳಿಸಿದೆ.

# ನಾಳೆ ಶ್ರೀ ಬೀರಲಿಂಗೇಶ್ವರ ಜಾತ್ರೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ತಾಲೂಕಿನ ತಿಮ್ಮಾಪೂರ ಗ್ರಾಮದ ಶ್ರೀ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ಜನವರಿ 26 ಶುಕ್ರವಾರದಂದು ನಡೆಯಲಿದೆ.

ಅಂದು ಬೆಳಿಗ್ಗೆ ದೇವರಿಗೆ ಪಂಚಾಮೃತ ಅಭಿಷೇಕ ಹಾಗೂ ವಿಶೇಷ ಪೂಜೆ ನಡೆಯಲಿದೆ.

ದೇವರಿಗೆ ಚಿನ್ನ ಬೆಳ್ಳಿ ಆಭರಣಗಳಿಂದ ಅಲಂಕಾರ ಮಾಡಿದ ಬಳಿಕ, ಭಕ್ತರ ದರ್ಶನಕ್ಕೆ ಅವಕಾಶವಿದೆ.

ಬೆಳಿಗ್ಗೆ 10 ಗಂಟೆಗೆ ದೇವರ ಗಂಗಾ ಪೂಜೆಯ ನಂತರ ಪಲ್ಲಕ್ಕಿ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ.

ಬಳಿಕ ದೇವಸ್ಥಾನದ ಆವರಣದಲ್ಲಿ ಪೂಜಾರಿಗಳು ಅನೇಕ ಪವಾಡಗಳನ್ನು ಮಾಡಲಿದ್ದಾರೆ. ನಂತರ ಮಹಾ ಪ್ರಸಾದ ಪ್ರಾರಂಭವಾಗುತ್ತದೆ ಎಂದು ಶ್ರೀ ಬೀರಲಿಂಗೇಶ್ವರ ಟ್ರಸ್ಟ್ ಕಮಿಟಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರ್‌ಜಿಎಸ್ ಬಿಇಡಿ ಕಾಲೇಜಿಗೆ ಉತ್ತಮ ಫಲಿತಾಂಶ



■ ವಿಜಯಸಾಕ್ಷಿ ಸುದ್ದಿ, ರೋಣ

ಪಟ್ಟಣದ ರಾಜೀವ್‌ಗಾಂಧಿ ಶಿಕ್ಷಣ ಸಂಸ್ಥೆಯ 2022-23ನೇ ಸಾಲಿನ ಬಿಇಡಿ ಫಲಿತಾಂಶ ಪ್ರಕಟಗೊಂಡಿದ್ದು, ಸಂಸ್ಥೆಯು ಶೇ.100ರಷ್ಟು ಪಲಿತಾಂಶವನ್ನು ದಾಖಲಿಸಿದೆ.

ಸಂಸ್ಥೆಯ ವಿದ್ಯಾರ್ಥಿನಿಯರಾದ ಶಾಹಿರಾಬಾನು ಹಣಗಿ ಶೇ.90.46 ಅಂಕಗಳೊಂದಿಗೆ ಪ್ರಥಮ, ಭಾಗ್ಯ ಸೂಡಿ ಶೇ.90.29 ಅಂಕಗಳೊಂದಿಗೆ ದ್ವಿತೀಯ, ವಿಜಯಲಕ್ಷ್ಮೀ ಎಚ್ ಶೇ.90.20 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆಯುವ ಮೂಲಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಸಂಸ್ಥೆಯ ಅಧ್ಯಕ್ಷ, ಶಾಸಕರಾದ ಜಿ.ಎಸ್. ಪಾಟೀಲ, ಮಿಥುನ್ ಪಾಟೀಲ, ಪ್ರಾಚಾರ್ಯ ವಾಯ್.ಎನ್. ಪಾಪಣ್ಣವರ ಸೇರಿದಂತೆ ಶಿಕ್ಷಕರು ಹಾಗೂ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ಪೊಲೀಸರ ಈ ಕಾರ್ಯ ನಿರಂತರವಾಗಿರಲಿ

▶▶ ಮೊದಲನೇ ಪುಟದಿಂದ

ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗೆ ಸಂಬಂಧಿಸಿದ 35.13 ಲಕ್ಷ ರೂ. ಮೌಲ್ಯದ 210 ಮೊಬೈಲ್, ಮುಂಡರಗಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಳ್ಳತನವಾದ 6 ಲಕ್ಷ ರೂ. ಮೌಲ್ಯದ ಮೂರು ಟ್ರ್ಯಾಕ್ಟರ್ ಟ್ರಾಲಿ, ರೋಣ ಠಾಣೆ ವ್ಯಾಪ್ತಿಯಲ್ಲಿ ಕಳ್ಳತನವಾದ 10 ಬೈಕ್ ಸಹಿತ ಒಟ್ಟು 39.70 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಅಧಿಕಾರಿಗಳ ಸಮಕ್ಷಮ ವಾರಸುದಾರರಿಗೆ ಮರಳಿಸಲಾಯಿತು.

ಸಮಾರಂಭದಲ್ಲಿ ಬೆಳಗಾವಿ ಐಜಿಪಿ ವಿಕಾಸ ಕುಮಾರ್, ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಹೆಚ್ಚುವರಿ ಎಸ್ಪಿ ಎಂ.ಬಿ. ಸಂಕದ, ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕೊಪ್ಪರ್ ಅಕಾಡೆಮಿಯಲ್ಲಿ ನೇತಾಜಿ ಜಯಂತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಕೊಪ್ಪರ್ ಅಕಾಡೆಮಿಯಲ್ಲಿ ನೇತಾಜಿ ಸುಭಾಷಚಂದ್ರ ಬೋಸ್ ಅವರ 127ನೇ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಅಕಾಡೆಮಿಯ ಕಾರ್ಯಾಧ್ಯಕ್ಷ ಶ್ರೀಕಾಂತ ಕೊಪ್ಪರ್ ಮಾತನಾಡಿ, ನೇತಾಜಿ ಸುಭಾಷಚಂದ್ರ ಬೋಸರ ಜನ್ಮದಿನವನ್ನು ಪರಾಕ್ರಮ ದಿವಸ ಎಂದು ಆಚರಿಸಲಾಗುತ್ತದೆ. ಬೋಸರು ರಾಷ್ಟ್ರೀಯತೆಯ ವಿಚಾರಧಾರೆಯಿಂದ ಹೆಚ್ಚು ಪ್ರಭಾವಿತರಾಗಿದ್ದರು. ಆಜಾದ್ ಹಿಂದ್ ಫೌಜ್‌ನಲ್ಲಿ ಸೈನಿಕರ ಮನೋಬಲವನ್ನು ಗಟ್ಟಿಗೊಳಿಸಲು ಶ್ರಮಿಸಿದರು ಎಂದರು. ಗವಿ ಹಿರೇಮಠ, ನೇತಾಜಿಯವರ ಕೊಡುಗೆ ಹಾಗೂ ಅವರ ಸ್ವಾತಂತ್ರ್ಯ ಹೋರಾಟದ ಹಾದಿಯ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಗವಿ ಹಿರೇಮಠ ಮತ್ತು ವಿಶ್ವ ಮಠಪತಿ ಸುಭಾಷಚಂದ್ರ ಬೋಸ್‌ರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಬಸವರಾಜ ಇಂಜಗನೇರಿ, ಸುನೀಲ ಹಲಕುರ್ಕಿ, ರಮೇಶ ಕೋತಂಬರಿ, ಶರಣಬಸವ ಭಗವತಿ, ಪ್ರದೀಪ ಜಮಖಂಡಿ, ಸತೀಶ್ ಮೂಲಿಮನಿ, ಶಿವಯೋಗಿ ಪಟ್ಟೇದ, ಕುಮಾರ ಗುತ್ತರಗಿ, ಬಸವರಾಜ ನಾಗಾವಿ, ಕಲಿಕಾರ್ಥಿಗಳಾದ ಶರಣು ಇಟಗಿ, ತರಸಾಲೆಪ್ಪ, ಜಗದೀಶ, ಮಂಜುನಾಥ, ವಿಶ್ವ ಮಠಪತಿ ಹಾಗೂ ವಿಹಾನ ಕೊಪ್ಪರ ಉಪಸ್ಥಿತರಿದ್ದರು.

# ಹೆಣ್ಣು ಮಕ್ಕಳ ಬಗ್ಗೆ ತಾತ್ಸಾರ ಬೇಡ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಭೀಮಸೇನ್ ಜೋಶಿ ಜಿಲ್ಲಾ ರಂಗಮಂದಿರದಲ್ಲಿ ಬುಧವಾರದಂದು ರಾಜ್ಯ ಮಟ್ಟದ ಆಪ್ತ ಸಮಾಲೋಚಕರ ಕಾರ್ಯಾಗಾರದಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮ ಜರುಗಿತು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಬಲೂನು ಹಾರಿಸುವ ಮುಖಾಂತರ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಆಚರಿಸುತ್ತಿರುವುದು ಸಂತೋಷದ ವಿಷಯ. ಎಲ್ಲ ರಂಗದಲ್ಲಿಯೂ ಹೆಣ್ಣು ಮಕ್ಕಳು ಈಗ ಮುಂಚೂಣಿಯಲ್ಲಿದ್ದಾರೆ. ಹೆಣ್ಣು ಮಕ್ಕಳನ್ನು ಉಳಿಸಿ ಹೆಣ್ಣು ಮಕ್ಕಳನ್ನು ಬೆಳೆಸಬೇಕು. ಹೆಣ್ಣು ಮಗುವಿನ ಬಗ್ಗೆ ತಾತ್ಸಾರ ಮಾಡದೇ ಸ್ವಾವಲಂಬಿಯಾಗಲು ಶಿಕ್ಷಣ ನೀಡಬೇಕು. ಸರ್ಕಾರದಿಂದ ಜಾರಿಯಾಗಿರುವ ವಿವಿಧ ಸೌಲಭ್ಯಗಳನ್ನು ಹೆಣ್ಣುಮಕ್ಕಳು ಪಡೆದುಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಆರ್.ಬಿ.ಎಸ್.ಕೆ ಮತ್ತು ಆರ್.ಕೆ.ಎಸ್.ಕೆ. ಉಪನಿರ್ದೇಶಕರಾದ ಡಾ.ವೀಣಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ, ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ. ಮೀನಾಕ್ಷಿ ಹಾಜರಿದ್ದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ರೂಪಸೇನ ಚವ್ಹಾಣ ಸ್ವಾಗತಿಸಿದರು.

# ಸಾರಿಗೆ ಸಂಸ್ಥೆಯಲ್ಲಿ 'ಚಾಲನಾ ಸಿಬ್ಬಂದಿಗಳ ದಿನ' ಆಚರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಆದೇಶದಂತೆ ಬುಧವಾರ 'ಚಾಲನಾ ಸಿಬ್ಬಂದಿಗಳ ದಿನಾಚರಣೆ'ಯನ್ನು ಗದಗ ಘಟಕದಲ್ಲಿ ಆಯೋಜಿಸಲಾಗಿತ್ತು.

ಗದಗ ವಿಭಾಗೀಯ ಕಛೇರಿಯಿಂದ ಮುಳಗುಂದ ನಾಕಾ ವೃತ್ತ ಹಾಗೂ ಕಿತ್ತೂರ ಚನ್ನಮ್ಮ ವೃತ್ತದ ಮೂಲಕ ಗದಗ ಘಟಕದವರೆಗೆ ಜಾಥಾ ನಡೆಸಲಾಯಿತು. ನಂತರ ಜರುಗಿದ ಸಭಾ ಕಾರ್ಯಕ್ರಮದಲ್ಲಿ ಪ್ರಾದೇಶಿಕ ತರಬೇತಿ ಅಧಿಕಾರಿ ಬಾಲಚಂದ್ರ ಮಾತನಾಡಿ, ಚಾಲಕರ ನಿಷ್ಕಾಳಜಿಯಿಂದ ಶೇ 85ರಷ್ಟು ಅಪಘಾತಗಳು ಸಂಭವಿಸುತ್ತಿವೆ. ಸ್ಥಿರ ಮನಸ್ಸಿನಿಂದ ಚಾಲನೆ ಮಾಡುವದರ ಜೊತೆಗೆ ಪ್ರಯಾಣಿಕರನ್ನು ಸುರಕ್ಷಿತವಾಗಿ ತಲುಪಿಸಲು ಶ್ರಮವಹಿಸಬೇಕು ಎಂದರು.

ಪ್ರಾದೇಶಿಕ ತರಬೇತಿ ಅಧಿಕಾರಿ ಶಿರಾಲಿ ಮಾತನಾಡಿ, ಸಂಸ್ಥೆಯಲ್ಲಿ ಚಾಲನಾ ಸಿಬ್ಬಂದಿಗಳ ಬಗ್ಗೆ ದಿನಾಚರಣೆ ಮಾಡುತ್ತಿರುವದು ಶ್ಲಾಘನೀಯ ಕಾರ್ಯವೆಂದರು. ಅಧ್ಯಕ್ಷತೆ ವಹಿಸಿದ್ದ ವಿಭಾಗೀಯ ನಿಯಂತ್ರಣಾಧಿಕಾರಿ ಡಿ.ಎಂ. ದೇವರಾಜ ಮಾತನಾಡಿ, ಚಾಲನಾ ಸಿಬ್ಬಂದಿಗಳು ಸಂಸ್ಥೆಯ ಆಧಾರ ಸ್ಥಂಬಗಳು. ದೇಶಕ್ಕೆ ರೈತ ಹೇಗೆ ಬೆನ್ನೆಲುಬೋ, ಅದೇ ರೀತಿ ಸಂಸ್ಥೆಗೆ ಚಾಲನಾ ಸಿಬ್ಬಂದಿಗಳು ಬೆನ್ನೆಲುಬಾಗಿದ್ದಾರೆ. ಸಾರ್ವಜನಿಕ ಪ್ರಯಾಣಿಕರ ಹಿತಾಸಕ್ತಿ ಮುಖ್ಯವಾದುದರಿಂದ ಸುರಕ್ಷಿತ ಚಾಲನೆ ಮಾಡುವಂತೆ ತಿಳಿಸಿದರು.

ವೇದಿಕೆಯ ಮೇಲೆ ಡಿಎಂಇ ಪಿ.ವೈ. ಗಡೇದ, ಬಿ.ಎಲ್. ಗೆಣ್ಣೂರ, ರೀಟಾ ಮಿರಜಕರ, ಎಸ್.ಎಂ. ವಾಲಿ ಹಾಗೂ ಕಾರ್ಮಿಕ ಮುಖಂಡರು, ಸಿಬ್ಬಂದಿಗಳು ಹಾಜರಿದ್ದರು. ಆರ್.ಎಸ್. ಕಾಶೀಗೌಡ್ರ ನಿರೂಪಿಸಿದರು. ಅಮೃತೇಶ ಹೊಸಳ್ಳಿ ವಂದಿಸಿದರು.

# ನಮೋ ಬ್ರಿಗೇಡ್‌ನಿಂದ ಹನಮ ರಥ ಯಾತ್ರೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹನುಮಂತನಲ್ಲಿದ್ದ ರಾಮ ಭಕ್ತಿ, ಸ್ವಾಮಿ ನಿಷ್ಠೆ, ಧೈರ್ಯ, ಸಾಹಸ, ಬಲಾಢ್ಯತೆ ಇವುಗಳು ಇಂದಿನ ಯುವ ಜನಾಂಗಕ್ಕೆ ಪ್ರೇರಣೆಯಾಗಬೇಕಿದೆ ಎಂದು ನಮೋ ಬ್ರಿಗೇಡ್ ಗದಗ ಜಿಲ್ಲಾ ಸಂಚಾಲಕ ವಿಜಯಾನಂದ ನಂದಿಕೋಲಮಠ ಅಭಿಪ್ರಾಯಪಟ್ಟರು.

ಅವರು ಬುಧವಾರ ನಮೋ ಬ್ರಿಗೇಡ್ ಸಹಭಾಗಿತ್ವದಲ್ಲಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಹನುಮ ರಥ ಲಕ್ಷ್ಮೇಶ್ವರಕ್ಕೆ ಆಗಮಿಸಿದ ಸಂದರ್ಭದಲ್ಲಿ ಮಾತನಾಡಿ, ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರರ ಜನ್ಮಭೂಮಿಯಲ್ಲಿ ರಾಮಮಂದಿರ ನಿರ್ಮಾಣವಾಗಿ, ಹಿಂದೂಗಳ ಮತ್ತು ಕರಸೇವಕರ ಕನಸು ನನಸಾಗಿದೆ. ಈ ಮಹೋನ್ನತ ಕಾರ್ಯ ಸಾಕಾರಗೊಳ್ಳುವಲ್ಲಿ ನರೇಂದ್ರ ಮೋದಿ ಅವರ ಶ್ರಮ ಸಾಕ್ಷಿದೆ. ಅವರ ಆಡಳಿತದಲ್ಲಿ ದೇಶ ಸುಭಿಕ್ಷತೆಯಿಂದ ಕೂಡಿರುತ್ತದೆ ಮತ್ತು ಸರ್ವತೋಮುಖ ಅಭಿವೃದ್ಧಿಯಾಗಿ ವಿಶ್ವ ಗುರುವಾಗಲಿದೆ. ಈ ನಿಟ್ಟಿನಲ್ಲಿ ಅವರನ್ನು ಮತ್ತೊಮ್ಮೆ ಪ್ರಧಾನಮಂತ್ರಿಯಾಗಿಸುವ ನಿಟ್ಟಿನಲ್ಲಿ ಚಿಂತಕ ಚಕ್ರವರ್ತಿ ಸೂಲಿಬೆಲೆ ನೇತೃತ್ವದಲ್ಲಿ ನಮೋ ಬ್ರಿಗೇಡ್ ರಾಜ್ಯಾದ್ಯಂತ ಹನಮ ರಥ ಯಾತ್ರೆ ಕೈಗೊಂಡಿದೆ. ರಥ ಯಾತ್ರೆ ವೇಳೆ ಮೋದಿ ನೇತೃತ್ವದ ಸರ್ಕಾರ ಕೈಗೊಂಡ ಅಭಿವೃದ್ಧಿ ಮತ್ತು ಜನಪರ ಕಾರ್ಯ ಯೋಜನೆಗಳ ಬಗ್ಗೆ ತಿಳಿಸಲಾಗುತ್ತದೆ. ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಮಂತ್ರಿಯಾಗುವಲ್ಲಿ ವಿದ್ಯಾವಂತ ಯುವಕರ ಪಾತ್ರ ಮಹತ್ವದ್ದಾಗಿದೆ ಎಂದರು.

ರಥಯಾತ್ರೆ ಪಟ್ಟಣದ ಹಾವಳಿ ಆಂಜನೇಯ ದೇವಸ್ಥಾನದ ಪ್ರಾಂಗಣಕ್ಕೆ ಆಗಮಿಸಿದ ವೇಳೆ ಸೇರಿದ್ದ ಯುವ ಸಮುದಾಯ ಪೂಜೆ ಸಲ್ಲಿಸಿ ಹಮನ ರಥ ಸ್ವಾಗತಿಸಿದರು. ನಮೋ ಬ್ರಿಗೇಡ್ ಸಹ ಸಂಚಾಲಕ ಆನಂದ ಕುರವತ್ತಿ, ಶಶಿ, ಕಿರಣಕುಮಾರ ಸಜ್ಜನ, ಪ್ರವೀಣಕುಮಾರ್, ರವಿ ಪುರಾಣಿಕಮಠ, ಮುರುಘೇಂದ್ರಸ್ವಾಮಿ ಹಿರೇಮಠ, ನವೀನ ಕುಂಬಾರ, ಮುತ್ತು ಕರ್ಜಕಣ್ಣವರ, ಮಾಂತೇಶ ಅಣ್ಣಿಗೇರಿ, ಸುನೀಲ ಮುಳಗುಂದ, ಈರಣ್ಣ ಮೆಣಸಿನಕಾಯಿ, ಮಂಜು ಹತ್ತಿಕಾಳ, ಮಂಜು ಕುಂಬಾರ ಮುಂತಾದವರಿದ್ದರು.

# ಗ್ರಾ.ಪಂ ನೌಕರರ ಬೇಡಿಕೆ ಈಡೇರಿಸಲು ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ (ಸಿ.ಐ.ಟಿ.ಯು ಸಂಯೋಜಿತ) ಗದಗ ಜಿಲ್ಲಾ ಸಮಿತಿ ವತಿಯಿಂದ ಮುಖ್ಯಮಂತ್ರಿಗಳಿಗೆ ಗ್ರಾಮ ಪಂಚಾಯತಿ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಗದಗ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದರು.

ಸಂಘದ ಅಧ್ಯಕ್ಷ ಬಸವರಾಜ ಮಂತೂರ ಮಾತನಾಡಿ, ಸರಕಾರ ಮೀನ-ಮೇಷ ಎಣಿಸದೆ ತಕ್ಷಣ ಕನಿಷ್ಟ ವೇತನ ರೂ. 31 ಸಾವಿರ ನೀಡಬೇಕು. ರಾಜ್ಯದ ಗ್ರಾ.ಪಂಗಳಲ್ಲಿ ಕರ ವಸೂಲಿಗಾರ, ಗುಮಾಸ್ತ, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ಜವಾನ, ನೀರುಗಂಟಿ, ಸ್ವಚ್ಛತಾಗಾರರು ಇತ್ಯಾದಿ ನೌಕರರು ಕನಿಷ್ಟ ಕೂಲಿ ಹೊರತುಪಡಿಸಿ ಬೇರೆ ಯಾವುದೇ ಸೌಲಭ್ಯವಿಲ್ಲದೆ ದುಡಿದು ನಿವೃತ್ತರಾಗಿದ್ದು, ಅವರಿಗೆ ತಕ್ಷಣ ಪಿಂಚಣಿ ಜಾರಿ ಮಾಡಬೇಕು ಹಾಗೂ ಇನ್ನಿತರ ಬೇಡಿಕೆಗಳನ್ನೂ ಕೂಡಲೇ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಮಹೇಶ ಹಿರೇಮಠ, ರುದ್ರಪ್ಪ ಕಂದಗಲ್, ಚಂದ್ರು ಉಪಾಧ್ಯಾ, ಬಸವರಾಜ ಮೇವುಂಡಿ, ಮಲ್ಲೇಶ ಪ್ಯಾಬಿ, ಈಶ್ವರ ದಮಾನಿ, ರುದ್ರಪ್ಪ ಐನಾಪೂರ, ರಮೇಶ ವಾಸನ್, ವೀರನಗೌಡ ಪಾಟೀಲ, ಮುತ್ತಣ್ಣ ಅರಹುಣಸಿ, ಬಸವರಾಜ ಅರ್ಕಸಾಲಿ, ಮಹೇಶ ಮೂಲಿಮನಿ, ಪ್ರಕಾಶ, ದೇವಪ್ಪ ಕಲಮನಿ, ಬಸಯ್ಯ ಜಂಗಮಠ, ಮರಲಿಂಗಪ್ಪ ಮುತಾರಿ, ಪ್ರಕಾಶ ನರೇಗಲ್ ಸೇರಿದಂತೆ ಗದಗ ಜಿಲ್ಲೆಯ ಗ್ರಾಮ ಪಂಚಾಯತ ನೌಕರರು ಉಪಸ್ಥಿತರಿದ್ದರು.

## ‘ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ’ ಕಾರ್ಯಕ್ರಮದಲ್ಲಿ ನ್ಯಾ.ಮೂ ಕೆ.ಗುರುಪ್ರಸಾದ

# ಲಿಂಗ ಸಮಾನತೆಯ ಅರಿವು ಮೂಡಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಲಿಂಗ ತಾರತಮ್ಯವನ್ನು ಹೋಗಲಾಡಿಸಿ, ಲಿಂಗ ಸಮಾನತೆ ಕಾಪಾಡುವಲ್ಲಿ ಇಲಾಖೆಯೊಂದಿಗೆ ಸಮುದಾಯದ, ಸಾರ್ವಜನಿಕರ ಪಾತ್ರ ಮಹತ್ವದ್ದಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಗುರುಪ್ರಸಾದ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹಮ್ಮಿಕೊಳ್ಳಲಾದ ‘ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ’ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಹೆಣ್ಣು ಮಕ್ಕಳನ್ನು ಉಳಿಸಿ ಅವರನ್ನು ಬೆಳೆಸುವುದು, ಅವರಿಗೆ ಶಿಕ್ಷಣ ಕೊಡುವುದು, ಲಿಂಗ ಪಕ್ಷಪಾತ ಮತ್ತು ಲಿಂಗ ಆಯ್ಕೆ ಮಾಡುವುದನ್ನು ತಡೆಗಟ್ಟುವ ಉದ್ದೇಶದಿಂದಲೇ ಸರ್ಕಾರದಿಂದ ಮಗಳನ್ನು ಉಳಿಸಿ ಮಗಳನ್ನು ಓದಿಸಿ (ಬೇಟಿ ಬಚಾವೋ-ಬೇಟಿ ಪಡಾವೋ) ಯೋಜನೆಯನ್ನು ಜಾರಿಗೆ ತರಲಾಗಿದೆ. ಬಾಲ್ಯ ವಿವಾಹ ನಿಷೇಧ ಹಾಗೂ ಫೋ-ಕ್ಸೋ ಅಧಿನಿಯಮದ ಕುರಿತು ಜಾಗೃತಿ ಮೂಡಿಸುವುದು ಹಾಗೂ ಹೆಣ್ಣುಮಕ್ಕಳಿಗೆ ಇರುವ ಹಕ್ಕುಗಳ ಕುರಿತು ಅರಿವು ಮೂಡಿಸುವುದು ಅವಶ್ಯಕವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಹೆಣ್ಣುಮಕ್ಕಳನ್ನು ಸನ್ಮಾನಿಸಲಾಯಿತು. ಹೊಯ್ಸಳ ಮತ್ತು ಕೆಳದಿ ಚನ್ನಮ್ಮ ಯೋಜನೆಯಡಿ ಅಸಾಧಾರಣ ಪ್ರತಿಭಾ ಪುರಸ್ಕಾರ ಪ್ರಶಸ್ತಿಗೆ ಆಯ್ಕೆಯಾದವರನ್ನು ಸನ್ಮಾನಿಸಲಾಯಿತು.



ಶಕುಂತಲಾ ಸಿಂಧನೂರ ಉಪನ್ಯಾಸ ನೀಡಿ, ಹೆಣ್ಣುಮಕ್ಕಳ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಲಿಂಗಾನುಪಾತ ಸುಧಾರಣೆಗಾಗಿಯೇ ಸರ್ಕಾರದಿಂದ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಹೆಣ್ಣುಮಕ್ಕಳನ್ನು ರಕ್ಷಿಸುವುದು ಮತ್ತು ಅವರನ್ನು ಓದಿಸುವುದು ಮುಖ್ಯವಾಗಿದೆ. ಇಂದಿನ ದಿನಗಳಲ್ಲಿ ಹೆಣ್ಣುಮಕ್ಕಳು ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ತಮ್ಮದೇ ಆದ ಕೊಡುಗೆ ಕೊಟ್ಟಿದ್ದಾರೆ. ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಿ ಅವರಿಗೆ ಪ್ರೋತ್ಸಾಹಿಸುವುದು ಪಾಲಕರ ಕರ್ತವ್ಯವಾಗಿದೆ. ಹೆಣ್ಣು ಮಕ್ಕಳಿಗಾಗಿ ಸರ್ಕಾರದಿಂದ ಜಾರಿಯಾಗಿರುವ ವಿವಿಧ ಯೋಜನೆಗಳ ಸೌಲಭ್ಯಗಳ ಸದುಪಯೋಗವಾಗಬೇಕೆಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪಿ.ವೈ. ಶೆಟ್ಟೆಪ್ಪನವರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮೇಲ್ವಿಚಾರಕರು ಹಾಜರಿದ್ದರು.

ಸುವರ್ಣಾ ಪತ್ತಾರ ಪ್ರಾರ್ಥಿಸಿದರು. ನಯನಾ ಅಳವಂಡಿ ಸ್ತ್ರೀ ಕುರಿತು ಗೀತೆ ಪ್ರಸ್ತುತಪಡಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಕಮಲಾ ಸರ್ವರನ್ನು ಸ್ವಾಗತಿಸಿದರು. ಮಹಿಳಾ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ರಾಧಾ ಮಣ್ಣೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುನೀತಾ ನಾಡಿಗೇರ ಕಾರ್ಯಕ್ರಮ ನಿರೂಪಿಸಿದರು. ರಾಜು ಕಂಠಗೊಣ್ಣವರ ವಂದಿಸಿದರು.

## ಶ್ರೀಗಂಧ ಬೆಳೆ ಆಧಾರಿತ ಕೃಷಿ ಅರಣ್ಯ ಮಾದರಿಗಳ ಕುರಿತು ವಿಚಾರ ಸಂಕಿರಣ

# ಗಂಧದ ಸಸಿ ನೆಡಲು ಮುಂದಾಗಿ

■ವಿಜಯಸಾಕ್ಷಿ ಸುದ್ದಿ, ಗದಗ

ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ, ಬೆಂಗಳೂರು ಮತ್ತು ಹುಲಕೋಟಿಯ ಐ.ಸಿ.ಎ.ಆರ್-ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ಶ್ರೀಗಂಧ ಬೆಳೆ ಆಧಾರಿತ ಕೃಷಿ ಅರಣ್ಯ ಮಾದರಿಗಳ ಕುರಿತು ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು.

ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆಯ ವಿಜ್ಞಾನಿ ಡಾ. ನರಸಿಂಹ ಮೂರ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗಂಧದ ಬೇಸಾಯ ಬಹಳ ಮುಖ್ಯವಾಗಿದೆ, ಕರ್ನಾಟಕದಲ್ಲಿ ಶ್ರೀಗಂಧ ಬೇಸಾಯವನ್ನು ಸಾಕಷ್ಟು ಜನ ಮಾಡುತ್ತಿದ್ದರು. ಆದರೆ ಈಗ ಬಹಳ ಕಡಿಮೆಯಾಗಿದೆ. ಬೇರೆ ದೇಶಗಳಿಂದ ಶ್ರೀಗಂಧವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಈ ನಿಟ್ಟಿನಲ್ಲಿ ಎಲ್ಲರೂ ಗಂಧದ ಗಿಡ ನೆಡಲು ಮುಂದಾಗಿರಿ ಎಂದು ತಿಳಿಸಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗದಗ ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಡಾ. ಅಶೋಕ ಎಸ್.ಎಚ್ ಮಾತನಾಡಿ, ಶ್ರೀಗಂಧದ ಬೇಸಾಯ ಹಾಗೂ ಮಾರುಕಟ್ಟೆ ಮಾಡಲು ಯಾವುದೇ ತೊಂದರೆಗಳಿಲ್ಲ. ಸರಕಾರದಿಂದ ಶ್ರೀಗಂಧ ಬೇಸಾಯದಲ್ಲಿ ಕಾಯ್ದೆ ಕಾನೂನುಗಳಲ್ಲಿ ಬದಲಾವಣೆಗಳಾಗಿವೆ. ಈ ಕಾರಣ ಗಂಧದ ಬೇಸಾಯ ಮಾಡಲು ಭಯ ಪಡಬೇಕಾಗಿಲ್ಲ ಎಂದು ತಿಳಿಸಿದರಲ್ಲದೆ, ಅರಣ್ಯ ಇಲಾಖೆಯಿಂದ ಗಂಧದ ಬೇಸಾಯ ಮಾಡಲು ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆಯ ವಿಜ್ಞಾನಿ ಡಾ. ರಶ್ಮಿ ರಮೇಶ ಶ್ಯಾನಭಾಗ, ಶ್ರೀಗಂಧದ ಸಸಿಗಳನ್ನು ನೆಟ್ಟರೆ, ಅದು ನಿಮಗೆ ಸ್ಥಿರ ಠೇವಣಿ ಇದ್ದ ಹಾಗೆ. ಕಾರಣ, ಹೊಲದ ಸುತ್ತಲೂ ಆಗಲಿ ಅಥವಾ ಪೂರ್ಣ ಪ್ರಮಾಣದ ಹೊಲದಲ್ಲಿ ಸಸಿಗಳನ್ನು ನೆಟ್ಟು ಹೆಚ್ಚಿನ ಆದಾಯ ಪಡೆಯಿರಿ ಎಂದು ತಿಳಿಸಿದರು.

ತಾಂತ್ರಿಕ ಅಧಿಕಾರಿ ಮಮತಾ ಎಮ್ ಶ್ರೀಗಂಧದ ಬೇಸಾಯದ ಪ್ರಾಮುಖ್ಯತೆ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೆವಿಕೆ ಹುಲಕೋಟಿಯ ಮಣ್ಣು ವಿಜ್ಞಾನಿ ನಾರಾಯಣ ಭಂಡಿ ಸ್ವಾಗತಿಸಿದರು. ಉದ್ಘಾಟನಾ ಕಾರ್ಯಕ್ರಮದ ನಂತರ ವಿಜ್ಞಾನಿಗಳು ಹಾಗೂ ಇಲಾಖೆಯ ಸಂರಕ್ಷಣಾಧಿಕಾರಿಗಳು ತಾಂತ್ರಿಕ ಮಾಹಿತಿಯನ್ನು ನೀಡಿದರು. ನಂತರ ರೈತರಿಗೆ ಕೆವಿಕೆಯ ಬೋಧನಾ ಕ್ಷೇತ್ರದಲ್ಲಿರುವ ಗಂಧದ ಗಿಡಗಳ ವೀಕ್ಷಣೆಗೆ ಕ್ಷೇತ್ರ ಭೇಟಿಯನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆವಿಕೆ ಹುಲಕೋಟಿಯ ಮುಖ್ಯಸ್ಥರಾದ (ಪ್ರಭಾರಿ), ಡಾ.ಸುಧಾ ವ್ಹಿ.ಮಂಕಣಿ ಮಾತನಾಡಿ, ಗದಗ ಜಿಲ್ಲೆಯಲ್ಲಿಯೂ ಶ್ರೀಗಂಧದ ಬೇಸಾಯ ಮಾಡಿ 15-20 ವರ್ಷದ ನಂತರ ಸ್ಥಿರ ಆದಾಯವನ್ನು ಪಡೆಯಬಹುದಾಗಿದೆ. ಅರಣ್ಯ ಇಲಾಖೆಯ ನೆರವನ್ನು ಪಡೆದು ಗದಗ ಜಿಲ್ಲೆಯನ್ನು ಶ್ರೀಗಂಧದ ಜಿಲ್ಲೆಯನ್ನಾಗಿ ಮಾಡೋಣ ಎಂದು ತಿಳಿಸಿದರು.

# ಯುವ ಪ್ರತಿಭೆಗಳಿಗೆ ‘ಯುವಜನೋತ್ಸವ’ ವೇದಿಕೆ



■ವಿಜಯಸಾಕ್ಷಿ ಸುದ್ದಿ, ರೋಣ

ಯುವಜನತೆಯಲ್ಲಿ ಅಗಾಧ ಪ್ರತಿಭೆಯಿದ್ದು, ಯುವಜನೋತ್ಸವದಂತ ವೇದಿಕೆಗಳು ಸೂಕ್ತ ಅವಕಾಶ ಕಲ್ಪಿಸುತ್ತವೆ. ಇದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಲ್ಲಿ ಯುವ ಪ್ರತಿಭೆಗಳು ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದು ಹೊಳೆಆಲೂರ ಶ್ರೀಯಚ್ಚರೇಶ್ವರ ಮಠದ ಶ್ರೀಯಚ್ಚರಸ್ವಾಮಿಗಳು ಹೇಳಿದರು.

ಅವರು ಇಲ್ಲಿನ ಶ್ರೀ ಕಲ್ಮೇಶ್ವರ ವಿದ್ಯಾ ಪ್ರಸಾರಕ ಸಮಿತಿಯ ಕಲಾ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯ ಹಾಗೂ ಕನ್ನಡ ಸ್ನಾತ್ತಕೋತ್ತರ ಅಧ್ಯಯನ ಕೇಂದ್ರ ಹೊಳೆ ಆಲೂರ ವತಿಯಿಂದ ಕ.ವಿ.ವಿ.ಯ 2023-24ನೇ ಸಾಲಿನ ಗದಗ ಜಿಲ್ಲಾ ವಲಯ ಮಟ್ಟದ ಯುವಜನೋತ್ಸವದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು.


ನಿವೃತ್ತ ಪ್ರಾಚಾರ್ಯ ಎಸ್.ಎಸ್. ಪಟ್ಟಣಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ನಿರ್ದೇಶಕ ಡಿ.ಎಸ್. ಶೆಲ್ಲಿಕೇರಿ ಮಾತನಾಡಿ, ಸ್ಪರ್ಧೆಯಲ್ಲಿ ಸೋಲು-ಗೆಲವು ಮುಖ್ಯವಲ್ಲ. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವದು ಮುಖ್ಯ. ಸತತ ಅಭ್ಯಾಸದಿಂದ ಯಶಸ್ಸು ಸಾಧಿಸಬಹುದು ಎಂದರು. ಅಧ್ಯಕ್ಷತೆಯನ್ನು ಸಂಸ್ಥೆಯ ನಿರ್ದೇಶ ಬಿ.ಬಿ. ಸಾಸಳ್ಳಿ ವಹಿಸಿದ್ದರು. ಸಂಸ್ಥೆಯ ನಿರ್ದೇಶಕರಾದ ಮಹಾಂತೇಶ ಬ್ಯಾಡಗಿ, ಸಿ.ಆರ್. ಕಂಬಿ, ಪ್ರಾಚಾರ್ಯ ಪಿ.ಎಸ್. ಕಣವಿ, ಮಹಾವಿದ್ಯಲಯದ ಪ್ರ. ಕಾರ್ಯದರ್ಶಿ ರವಿಚಂದ್ರ ಕುರಿ, ಮಹಿಳಾ ಪ್ರತಿನಿಧಿ ಅನಿತಾ ಅಂಗಡಕಿ, ಯುವಜನೋತ್ಸವ ಸಂಚಾಲಕ ವಿ.ಪಿ. ಪಾಟೀಲ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಮಹಾವಿದ್ಯಾಲಯದ ಸಿಬ್ಬಂದಿಗಳಾದ ಪ್ರೊ. ಶರಣಯ್ಯ ಹಳ್ಳೂರ, ಪ್ರೊ. ಎನ್.ಆರ್. ಹಿರೇಸಕ್ಕರಗೌಡರ, ಡಾ. ಎಸ್.ಬಿ. ಸಜ್ಜನರ, ಡಾ.ಪ್ರಭು ಗಂಜಿಹಾಳ, ಪ್ರೊ. ಎಸ್.ವಾಯ್. ಪೂಜಾರ, ಡಾ.ಕುಮಾರ ಹಂಜಗಿ, ಪ್ರಾಧ್ಯಾಪಕರಾದ ಆನಂದ ಕೆಂಚನಗೌಡ್ರ, ಎಂ.ಎಸ್. ಬೇವೂರ, ರೇಶ್ಮಾ ಟೆಕ್ಕೇದ, ಸಂತೋಷ ಮಾಳವಾಡ, ಜಯಶ್ರೀ ಪಾಟೀಲ, ಎಂ.ಆರ್. ಆರೇರ, ಕೆ.ಎಸ್. ಕೊಪ್ಪದ, ಶಿಲ್ಪಾ ಮೆದನಾಪೂರ, ಜಿ.ಎಂ. ಪೊಲೀಸಪಾಟೀಲ, ವಿ.ಬಿ. ಜಾಲಿಹಾಳ, ವಾಯ್.ಎಂ. ನದಾಫ, ಎಸ್.ಆಯ್. ಗಡಗಿ, ಎಸ್.ಆರ್. ಮುಂದಿನಮನಿ, ಎಸ್.ಜಿ. ಮಾಳವಾಡ, ಮಂಜುನಾಥ ಸೋಮನಕಟ್ಟಿ, ಮಂಜುನಾಥ ಬಸರಕೋಡ, ಮಹಾವಿದ್ಯಾಲಯದ ವಿದ್ಯಾರ್ಥಿವೃಂದದವರು ಉಪಸ್ಥಿತರಿದ್ದರು.

# ಲಿಮ್ಕಾ ರೆಕಾರ್ಡ್ಸ್‌ನಲ್ಲಿ ಬಸವರಾಜ ಹೊರಟ್ಟಿ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಳೆದ ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲ ಕರ್ನಾಟಕದ ಸಾರ್ವಜನಿಕ ಹಾಗೂ ಶೈಕ್ಷಣಿಕ ವಲಯದಲ್ಲಿ ಅಪ್ರತಿಮ ಸಾಧನೆಗೈದ ಸಭಾಪತಿ ಬಸವರಾಜ ಹೊರಟ್ಟಿ ಅವರ ಮುಡಿಗೆ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆಯ ಗರಿ ಸೇರ್ಪಡೆಯಾಗಿದೆ.



2024ನೇ ಸಾಲಿನ ವಾರ್ಷಿಕ ಪುಸ್ತಕದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ಐತಿಹಾಸಿಕ ದಾಖಲೆಗಳನ್ನು ದಾಖಲಿಸಿ ಪ್ರಕಟಿಸಲಾಗಿದೆ. ಬಸವರಾಜ ಹೊರಟ್ಟಿಯವರು ಇಲ್ಲಿಯವರೆಗೆ ಎಂಟು ಬಾರಿ ಗೆಲುವನ್ನು ತಮ್ಮದಾಗಿಸಿಕೊಳ್ಳುವ ಮೂಲಕ ಐತಿಹಾಸಿಕ ದಾಖಲೆಗೆ ಪಾತ್ರರಾಗಿದ್ದಾರೆ. ಭಾರತದ ಇತಿಹಾಸದಲ್ಲಿಯೇ ಇದೊಂದು ಐತಿಹಾಸಿಕ ದಾಖಲೆಯಾಗಿದೆ. ಇಷ್ಟೊಂದು ಸುದೀರ್ಘ ಚುನಾವಣಾ ಅವಧಿಯ ರಾಜಕಾರಣವನ್ನು ಮತ್ತೊಬ್ಬರು ದೇಶದ ಇತಿಹಾಸದಲ್ಲಿ ಮಾಡಿಲ್ಲ.

ಶಿಕ್ಷಕರೊಬ್ಬರು ಶಿಕ್ಷಕರ ಪ್ರತಿನಿಧಿಯಾಗಿ ಹಲವಾರು ಖಾತೆಗಳ ಸಚಿವರಾಗಿ ಮೂರನೇ ಬಾರಿ ಸಭಾಪತಿಗಳಾಗಿ ಸೇವೆ ಸಲ್ಲಿಸುತ್ತಿರುವದು ಇತಿಹಾಸ. ಬಸವರಾಜ ಹೊರಟ್ಟಿ ಅವರು ನಾಡಿನ ಶಿಕ್ಷಕ ಸಮೂಹದ ಸ್ವಾಭಿಮಾನದ ಸಂಕೇತವಾಗಿದ್ದು, ಇದೀಗ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿರುವುದು ಅವರ ಹಿತೈಷಿಗಳಿಗೆ, ಅಭಿಮಾನಿಗಳಿಗೆ ಶಿಕ್ಷಕ ಸಮೂಹಕ್ಕೆ ಹರ್ಷ ತಂದಿದೆ.

# ರಾಜ್ಯ ಮಟ್ಟದ ಕರುನಾಡ ಕವಿಗಳ ಸಂಭ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಜನಸಿರಿ ಫೌಂಡೇಶನ್ ವತಿಯಿಂದ ಫೆ.25ರಂದು ಬೆಂಗಳೂರು ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾವನ ರಸ್ತೆಯ ಶ್ರೀ ಸಾಯಿ ಸದ್ಭಾವನ ಶಾಲಾ ಆವರಣದಲ್ಲಿ ರಾಜ್ಯ ಮಟ್ಟದ ಕರುನಾಡ ಕವಿಗಳ ಸಂಭ್ರಮ-2024 ಕಾರ್ಯಕ್ರಮ ನೆರವೇರಲಿದೆ.

501 ಕವಿಗಳಿಂದ 21 ನಿಮಿಷದೊಳಗೆ ಕವನಗಳ ರಚಿಸುವ ಕಾರ್ಯಕ್ರಮ ಆಯೋಜಿಸಲಾಗಿದ್ದು, ಭಾಗವಹಿಸಲು ಇಚ್ಛಿಸುವ ಕವಿಗಳು ಫೆ.19ರೊಳಗಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಲು 9845235778 ಸಂಪರ್ಕಿಸಬಹುದಾಗಿದೆ ಎಂದು ಆಯೋಜಕ ನಾಗಲೇಖ ಪ್ರಕಟಣೆಗೆ ತಿಳಿಸಿದ್ದಾರೆ.

# ಶಾಲಾ ವಾರ್ಷಿಕೋತ್ಸವ ನಾಳೆ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿ ಶಿಕ್ಷಣ ಸಮಿತಿಯ ಬಿ.ಸಿ. ಬಂಗಾರಿ ಪೂರ್ವ ಪ್ರಾಥಮಿಕ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಯಲ್ಲಿ ಜ.26ರಂದು ಬೆಳಿಗ್ಗೆ 7 ಗಂಟೆಗೆ ಪ್ರಜಾರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ, 10ಕ್ಕೆ ಶಾಲಾ ಮಕ್ಕಳಿಂದ ವಿವಿಧ ಕಾರ್ಯಕ್ರಮ, ಪಾಲಕರ ದಿನಾಚರಣೆ ನಡೆಯಲಿದೆ.

ಸಂಜೆ 4ರಿಂದ 2023024ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರತಿಭಾನ್ವಿತ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದ್ದು, ನೇತೃತ್ವವನ್ನು ಗವಿಮಠದ ಮಲ್ಲಿಕಾರ್ಜುನ ಮಾಹಾಸ್ವಾಮಿಗಳು ವಹಿಸಿಕೊಳ್ಳುವರು. ಅಧ್ಯಕ್ಷತೆಯನ್ನು ಎಂ.ಡಿ. ಬಟ್ಟೂರ ಎಸ್.ಸಿ. ಬಡ್ನಿ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಪ.ಪಂ ಮುಖ್ಯಾಧಿಕಾರಿ ಮಂಜುನಾಥ ಗುಳೆದ, ಈಶ್ವರ ಮೆಡ್ಲೇರಿ, ಶೈಲಾ ಆದಿ ಪಾಲ್ಗೊಳ್ಳುವರು ಎಂದು ಮುಖ್ಯಾಧ್ಯಾಪಕ ಎ.ಎಸ್. ಬೇಲೇರಿ ಹಾಗೂ ವಾಯ್.ಎಸ್.ಶಂಕಿನ ಪ್ರಕಟಣೆಗೆ ತಿಳಿಸಿದ್ದಾರೆ.

# CSEET ಪರೀಕ್ಷೆಯಲ್ಲಿ ಸಾಧನೆ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಮನೋರಮಾ ಕಾಲೇಜಿನ ವಿದ್ಯಾರ್ಥಿ ಪವನ ಮುದಗಲ್ಲ ಅಖಇಇಖ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

ಸಾಧಕ ವಿದ್ಯಾರ್ಥಿಯನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ, ಪ್ರಾಚಾರ್ಯ ಬಿ.ಎಸ್. ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ಅಲ್ವಿನಾ.ಡಿ ಹಾಗೂ ಸಿಬ್ಬಂದಿ ವರ್ಗದವರು ಶ್ಲಾಘಿಸಿದ್ದಾರೆ.

# ಸ್ಪೋರ್ಟ್ಸ್ ಅಕಾಡೆಮಿ ಆಫ್ ಗದಗ ತಂಡಕ್ಕೆ ಜಯ



■ವಿಜಯಸಾಕ್ಷಿ ಸುದ್ದಿ, ಗದಗ

ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ಕೆ.ಎಸ್.ಸಿ.ಎ. ಸೆಕೆಂಡ್ ಡಿವಿಜನ್ ಲೀಗ್ ಪಂದ್ಯದಲ್ಲಿ ಗದಗ ತನ್ನ ಎರಡನೇ ಪಂದ್ಯವನ್ನು ಗೆದ್ದು ಅಂಕಪಟ್ಟಿಯಲ್ಲಿ ಮೊದಲನೇ ಸ್ಥಾನ ಗಿಟ್ಟಿಸಿಕೊಂಡಿದೆ. ಸ್ಪೋರ್ಟ್ಸ್ ಅಕಾಡೆಮಿ ಆಫ್ ಗದಗ ತಂಡ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡಿತು. ಗದಗ ತಂಡ 36.4 ಓವರ್‌ನಲ್ಲಿ 151 ರನ್ ಆಲ್‌ಔಟ್ ಆಯಿತು.

ಗದಗ ಪರ ಸಚಿನ ಪಾಟೀಲ 34, ನಿಹಾಲ್ ಆಕಾಶ 37 ರನ್ ಗಳಿಸಿದರು.

ಸ್ಪೋರ್ಟ್ಸ್ ಅಕಾಡೆಮಿ ಆಫ್ ಗದಗ ತಂಡ ನೀಡಿದ ಮೊತ್ತದ ಉತ್ತರವಾಗಿ ಬ್ಯಾಟಿಂಗಗೆ ಇಳಿದ ಟ್ಯಾಲೆಂಟ್ ಸ್ಪೋರ್ಟ್ಸ್ ಕ್ಲಬ್ ತಂಡ 87 ರನ್‌ಗಳಿಗೆ ಆಲ್‌ಔಟ್ ಆಯಿತು. ಗದಗ ಪರ ಸತೀಶ ಮಾಳೋದೆ 9.5 ಓವರ್ ಮಾಡಿ ಕೇವಲ 20 ರನ್ ನೀಡಿ 4 ವಿಕೆಟ್ ಪಡೆದು ಮಿಂಚಿದರು. ಕಿಶೋರ ಉಪ್ಪಾರ 3 ವಿಕೆಟ್, ಅಸ್ಲಂ 2, ದೇವೇಶ ಜೈನ್ 1 ವಿಕೆಟ್ ಪಡೆದರು.

## ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಶ್ಯಾಮಸುಂದರ ಇನಾಮದಾರ

# ಶೋಷಣೆಗೊಳಗಾದ ಹೆಣ್ಣು ಮಕ್ಕಳನ್ನು ರಕ್ಷಿಸಿ



■ವಿಜಯಸಾಕ್ಷಿ ಸುದ್ದಿ, ನರಗುಂದ

ಹೆಣ್ಣೆಂಬ ಕೀಳರಿಮೆ ಬೇಡ. ಹೆಣ್ಣಿಂದಲೇ ಸೃಷ್ಟಿ, ಹೆಣ್ಣಿಲ್ಲದ ಜಗತ್ತನ್ನು ಊಹಿಸಲೂ ಅಸಾಧ್ಯ. ಹೆಣ್ಣು ಮಕ್ಕಳನ್ನು ಗೌರವಿಸುವ ಮನಸ್ಸು ಸಮಾಜದ ಎಲ್ಲ ವರ್ಗದಲ್ಲೂ ಬೆಳೆಯಬೇಕು. ಮೂಢನಂಬಿಕೆಗಳಂತಹ ದುಷ್ಟ ಆಚರಣೆಗೆ ಸಿಲುಕಿ ಶೋಷಣೆಗೆ ಒಳಗಾಗುತ್ತಿರುವ ಹೆಣ್ಣು ಮಕ್ಕಳನ್ನು ರಕ್ಷಿಸಿ, ಉತ್ತಮ ಶಿಕ್ಷಣ ಒದಗಿಸುವ ಕೆಲಸವಾಗಬೇಕೆಂದು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ಯಾಮಸುಂದರ ಇನಾಮದಾರ ಹೇಳಿದರು.

ತಾಲೂಕಿನ ಬನಹಟ್ಟಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ತಾ.ಪಂ ನರಗುಂದ, ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ಪಬ್ಲಿಕ್ ಸ್ಕೂಲ್ ಸಹಯೋಗದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳ ಜೀವನ ಪುರುಷರ ಜೀವನಕ್ಕಿಂತ ಸವಾಲಿನದಾಗಿದೆ. ಅಂತಹ ಸವಾಲನ್ನು ಸಮರ್ಪಕವಾಗಿ ಮತ್ತು ಧೈರ್ಯವಾಗಿ ಎದುರಿಸುವ ಶಕ್ತಿ ಹೆಣ್ಣು ಮಕ್ಕಳಿಗೆ ಬರಬೇಕೆಂದರೆ, ಹೆಣ್ಣು ಶಿಕ್ಷಣದಿಂದ ವಂಚಿತರಾಗಬಾರದು ಎಂದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಆನಂದ ಭೋವಿ ಮಾತನಾಡಿ, ಬಾಲ್ಯ ವಿವಾಹದಿಂದಾಗಿ ಹೆಣ್ಣು ಮಕ್ಕಳ ಜೀವನ ಚಕ್ರ ಏರುಪೇರಾಗುತ್ತದೆ. ಎಲ್ಲೇ ಬಾಲ್ಯವಿವಾಹ ನಡೆದರೂ ಅದನ್ನು ಮಹಿಳೆಯರು ಸೇರಿದಂತೆ ಎಲ್ಲರೂ ತಡೆಗಟ್ಟಲು ಮುಂದಾಗಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವ ವಿಚಾರದಲ್ಲಿ ಹೆತ್ತ ಪಾಲಕರಲ್ಲಿ ಕೀಳರಿಮೆ ಬೇಡ. ಹೆಣ್ಣು ಭೂತಾಯಿಗೆ ಸರಿಸಮವಾಗಿದ್ದಾಳೆ. ಹೆಣ್ಣನ್ನು ಗೌರವಿಸುವ ಕೆಲಸವಾಗಬೇಕೆಂದು ಹೇಳಿದರು.

ಹೆಣ್ಣುಮಕ್ಕಳು ಎದುರಿಸುತ್ತಿರುವ ಅಸಮಾನತೆಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು. ಹೆಣ್ಣು ಮಕ್ಕಳ ಹಕ್ಕುಗಳು ಮತ್ತು ಸ್ತ್ರೀ ಶಿಕ್ಷಣ, ಆರೋಗ್ಯ ಮತ್ತು ಪೋಷಣೆಯ ಮಹತ್ವದ ಬಗ್ಗೆ ಕಾರ್ಯಕ್ರಮದಲ್ಲಿ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ಸ್ವ-ಸಹಾಯ ಸಂಘದ ಸದಸ್ಯರು, ಸಂಜೀವಿನಿ ಸಿಬ್ಬಂದಿ, ಬನಹಟ್ಟಿ ಗ್ರಾ.ಪಂ ಸದಸ್ಯರು ಹಾಗೂ ಶಾಲಾ ಮಕ್ಕಳು ಭಾಗವಹಿಸಿದ್ದರು. ಸುನೇನಾ ಪಾಟೀಲ್ ಮತ್ತು ಸಂಗಡಿಗರು ಪ್ರಾರ್ಥನೆ ಹಾಡಿದರು. ಕವಿತಾ ಶಿರಿಯನ್ನವರ ಸ್ವಾಗತಿಸಿದರು. ಸಿದ್ದಲಿಂಗಯ್ಯ ವಂದಿಸಿದರು.

ಉಪ ಪ್ರಾಚಾರ್ಯ ಎಸ್.ವಾಯ್. ಪಾಟೀಲ್ ಮಾತನಾಡಿ, ನಮ್ಮ ಪೂರ್ವಜರ ಕಾಲದಲ್ಲಿ ಮಹಿಳೆಯರಿಗೆ ಬಹಳ ಗೌರವವಿತ್ತು. ಬ್ರಿಟಿಷರು ಬಂದ ಬಳಿಕ ಅವರ ಆಡಳಿತಾವಧಿಯಲ್ಲಿ ಸ್ತ್ರೀಯರ ಸ್ಥಾನಮಾನ ಕಡಿಮೆಯಾಯ್ತು. ಅನೇಕ ಮಹಿಳಾಮಣಿಗಳು ದೇಶದ ಸ್ವಾತಂತ್ರ್ಯಕ್ಕೆ ತಮ್ಮ ಜೀವನವನ್ನೇ ಅರ್ಪಿಸಿಕೊಂಡಿದ್ದಾರೆ. ಅಂತಹ ಸಾಧಕ ಮಹಿಳೆಯರಂತೆ ನಮ್ಮ ಸಮಾಜದ ಹೆಣ್ಣು ಮಕ್ಕಳು ಬೆಳೆಯಬೇಕೆಂದು ಅಭಿಪ್ರಾಯಪಟ್ಟರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka